# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ ಶುಕ್ರವಾರ, ಜನವರಿ 07, 2022

ಸಂಪುಟ : 48 ಸಂಚಿಕೆ : 237 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com





**ಅನ್ನದಾತನ ಅಂಗಳಕ್ಕೆ ಬೆಳ್ಳಕ್ಕಿ ಬಳಗ ...** ಉಕ್ಕಡಗಾತ್ರಿ ಸಮೀಪ ತುಂಗಭದ್ರಾ ನದಿ ಆಶ್ರಿತ ಭತ್ತದ ಗದ್ದೆಯಲ್ಲಿ ನಾಟಿ ಮಾಡಲು ರೈತರು ಟ್ರ್ಯಾಕ್ಟರ್‌ನಲ್ಲಿ ಜಮೀನು ಹದಗೊಳಿಸುತ್ತಿರುವ ಸಂದರ್ಭದಲ್ಲಿ ಭೂಮಿಯಲ್ಲಿದ್ದ ಹುಳುಗಳನ್ನು ಹೆಕ್ಕಲು ಧಾವಿಸಿರುವ ಬೆಳ್ಳಕ್ಕಿಗಳು.

# ನಗರ ಸ್ಥಳೀಯ ಸಂಸ್ಥೆಗಳಿಗೆ 3,885 ಕೋಟಿ ಬಿಡುಗಡೆ

## ದಾವಣಗೆರೆಯ ದೇವಾಂಗ ಸಂಘಕ್ಕೆ ರಿಯಾಯಿತಿ ದರದಲ್ಲಿ ಜಾಗ

**ಮುಂದುವರೆದ ನಗರಸಭೆಗಳಿಗೆ ತಲಾ 40 ಕೋಟಿ, ನಗರಸಭೆಗಳಿಗೆ 30 ಕೋಟಿ, ಪುರಸಭೆಗಳಿಗೆ ತಲಾ ಹತ್ತು ಕೋಟಿ ಹಾಗೂ ಪಟ್ಟಣ ಪಂಚಾಯಿತಿಗಳಿಗೆ ಐದು ಕೋಟಿ ರೂ.ಹಣ ನಿಗದಿ.**

ಬೆಂಗಳೂರು, ಜ.6 - ನಗರ, ಪುರಸಭೆ ಸೇರಿದಂತೆ 302 ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ 3885 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ.

ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಮುಖ್ಯಮಂತ್ರಿ ಅವರ ಅಮೃತ್ ಯೋಜನೆ ಜಾರಿಗೊಳಿಸುವುದೂ ಸೇರಿದಂತೆ, ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡಲಾಗಿದೆ ಎಂದಿದ್ದಾರೆ.

ಈ ಹಣದಲ್ಲಿ ಮುಖ್ಯಮಂತ್ರಿಯವರ ಅಮೃತ್ ಯೋಜನೆ ಸೇರಿದಂತೆ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಮುಂದಿನ ಐದು ವರ್ಷಗಳಲ್ಲಿ ಕಲ್ಪಿಸಿಕೊಡಲು ಸಭೆ ಅನುಮೋದನೆ ನೀಡಿದೆ ಎಂದರು.

ನೋಂದಣಿ ಕಚೇರಿಗಳಲ್ಲಿ ಮೂಲ ಸೌಕರ್ಯ ಹಾಗೂ ಕಂಪ್ಯೂಟರೀಕರಣ ಮೇಲ್ದರ್ಜೆಗೇರಿಸಲು ಬಿಲ್ಡ್ ಓನ್ ಆಪರೇಟ್ ಮಾದರಿಯಲ್ಲಿ ಐಟಿ ಉಪಕರಣಗಳ ಪೂರೈಕೆ, ಅಳವಡಿಕೆ, ಕಾರ್ಯಾಚರಣೆ ಹಾಗೂ ನಿರ್ವಹಣೆ ಮಾಡಲು ಮತ್ತು ಅಗತ್ಯವಿರುವ ಮಾನವ ಸಂಪನ್ಮೂಲವನ್ನು ನಿಯೋಜಿಸುವ ಸಂಬಂಧ ಸೇವಾ ಪೂರೈಕೆದಾರರನ್ನು ಆಯ್ಕೆ ಮಾಡಲು ಅಗತ್ಯವಿರುವ 406.44 ಕೋಟಿ ರೂ.ಗಳ ಅನುದಾನಕ್ಕೆ ಅನುಮೋದನೆ ನೀಡಿದೆ.

ಜಲಜೀವನ್ ಮಿಷನ್ ಅನುದಾನ ಮತ್ತು ವಿಶ್ವಬ್ಯಾಂಕ್ ಹಣಕಾಸಿನ ನೆರವಿನಿಂದ ರಾಜ್ಯಾದ್ಯಂತ ಗ್ರಾಮೀಣ ಕುಡಿಯುವ ನೀರು (3ನೇ ಪುಟಕ್ಕೆ)

# ಇಂದಿನಿಂದ ವಾರಾಂತ್ಯದ ಕರ್ಫ್ಯೂ

## ಅಗತ್ಯ ವಸ್ತುಗಳು, ಸಾಗಾಣಿಕೆಗೆ ಮಾತ್ರ ಅವಕಾಶ

**ಶುಕ್ರವಾರ ರಾತ್ರಿ 10 ಗಂಟೆಯಿಂದ ಸೋಮವಾರ ಬೆಳಗಿನ ಜಾವ 5 ಗಂಟೆವರೆಗೆ ಕರ್ಫ್ಯೂ ಜಾರಿ**

ಬೆಂಗಳೂರು, ಜ. 6 - ಕೊರೊನಾ 3ನೇ ಅಲೆಗೆ ಕಡಿವಾಣ ಹಾಕಲು ರಾಜ್ಯ ಸರ್ಕಾರ ಜಾರಿಗೆ ತಂದಿರುವ ವಾರಾಂತ್ಯದ ಕರ್ಫ್ಯೂ ನಾಳೆ ಶುಕ್ರವಾರ ರಾತ್ರಿಯಿಂದ ಜಾರಿಗೆ ಬರಲಿದೆ.

ಎರಡು ದಿನಗಳ ಒಟ್ಟಾರೆಯಾಗಿ ರಾಜ್ಯ ಸ್ತಬ್ಧಗೊಳ್ಳಲಿದೆ. ಈ ಸಮಯದಲ್ಲಿ ಅಗತ್ಯ ವಸ್ತುಗಳ ಖರೀದಿ ಮತ್ತು ಸಾಗಾಣಿಕೆ ಹೊರತುಪಡಿಸಿ, ಉಳಿದೆಲ್ಲ ವ್ಯವಸ್ಥೆ ಬಂದಾಗಲಿದೆ.

ಈ ಸಂದರ್ಭದಲ್ಲಿ ಅನಗತ್ಯವಾಗಿ ಜನರು ರಸ್ತೆಗಿಳಿದರೆ, ಪೊಲೀಸರ ಕೆಂಗಣ್ಣಿಗೆ ಗುರಿಯಾಗಿ ಶಿಕ್ಷೆಗೆ ಒಳಗಾಗಬೇಕಾಗುತ್ತದೆ. ಬೆಂಗಳೂರು ಹೊರತುಪಡಿಸಿ, ಉಳಿದೆಡೆ ವಾರಾಂತ್ಯ ಕರ್ಫ್ಯೂ ರದ್ದುಪಡಿಸುವಂತೆ ಇಂದಿನ ಸಚಿವ ಸಂಪುಟದಲ್ಲಿ ಬಹುತೇಕ ಸಚಿವರು ಮನವಿ ಮಾಡಿದರೂ, ಮುಖ್ಯಮಂತ್ರಿಯವರು ಮಾತ್ರ ಸರ್ಕಾರ ತೆಗೆದುಕೊಂಡಿರುವ ನಿರ್ಧಾರದಿಂದ ಹಿಂದೆ ಸರಿಯಲು ಸಮ್ಮತಿಸಲಿಲ್ಲ.

### ಶಾಲೆಗಳಿಗೆ ಶನಿವಾರ ರಜೆ

ಬೆಂಗಳೂರು, ಜ. 6 – ರಾಜ್ಯ ಸರ್ಕಾರ ವಾರಾಂತ್ಯದ ಕರ್ಫ್ಯೂ ವಿಧಿಸಿರುವ ಹಿನ್ನೆಲೆಯಲ್ಲಿ ಶಾಲೆಗಳಿಗೆ ಶನಿವಾರ ರಜೆ ಘೋಷಿಸಲಾಗಿದೆ. ಈ ಬಗ್ಗೆ ಆದೇಶ ಹೊರಡಿಸಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ವಾರಾಂತ್ಯದ ಕರ್ಫ್ಯೂ ಅವಧಿಯಲ್ಲಿ ಶನಿವಾರದಂದು ರಾಜ್ಯದ ಎಲ್ಲಾ ಶಾಲೆಗಳಿಗೆ ರಜೆ ಇರಲಿದೆ ಎಂದು ತಿಳಿಸಿದ್ದಾರೆ.

ಎರಡನೇ ಅಲೆಯಿಂದಾದ ಅನುಭವನ್ನು ಗಮನದಲ್ಲಿಟ್ಟುಕೊಂಡು ಮುಂಜಾಗ್ರತೆಯಾಗಿ ಕಠಿಣ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. ಮುಂದಿನ ಹತ್ತು ದಿನಗಳವರೆಗೂ ಪರಿಸ್ಥಿತಿಯನ್ನು ಕಾದು ನೋಡೋಣ. ನಂತರ ತಜ್ಞರ ಅಭಿಪ್ರಾಯ ಪಡೆದು, ಸಡಿಲಿಕೆ ಮಾಡುವ ಬಗ್ಗೆ ನಿರ್ಧಾರ ಮಾಡೋಣ ಎಂದು ತಮ್ಮ ಸಹೋದ್ಯೋಗಿಗಳಿಗೆ ತಿಳಿಸುವ ಮೂಲಕ ರಾಜ್ಯಾದ್ಯಂತ ವಾರಾಂತ್ಯ ಕರ್ಫ್ಯೂ ಇರಲಿದೆ ಎಂದು ತಿಳಿಸಿದ್ದಾರೆ.

ಕರ್ಫ್ಯೂ ಸಂದರ್ಭದಲ್ಲಿ ಸರಕು (3ನೇ ಪುಟಕ್ಕೆ)

# ಮಾರ್ಗಸೂಚಿಯಲ್ಲಿ ಬದಲಾವಣೆ ಇಲ್ಲ

**ಬೆಂಗಳೂರು ಹೊರತುಪಡಿಸಿ ಉಳಿದೆಡೆ ವಾರಾಂತ್ಯ ಕರ್ಫ್ಯೂ ಕೈ ಬಿಡಲು ಸಂಪುಟ ಸಭೆಯಲ್ಲಿ ಮಾಡಿದ ಒತ್ತಾಯಕ್ಕೆ ಒಪ್ಪದ ಮುಖ್ಯಮಂತ್ರಿ ಬೊಮ್ಮಾಯಿ**

ಬೆಂಗಳೂರು, ಜ. 6 - ಕೋವಿಡ್ ನಿಯಮಗಳ ಬದಲಾವಣೆ ಇಲ್ಲ. ವಾರಾಂತ್ಯದ ಕರ್ಫ್ಯೂ ರಾಜ್ಯಾದ್ಯಂತ ಜಾರಿಯಲ್ಲಿರುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸ್ಪಷ್ಟಪಡಿಸಿದ್ದಾರೆ.

ಸಚಿವ ಸಂಪುಟ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಬೆಂಗಳೂರು ಹೊರತುಪಡಿಸಿ, ಉಳಿದ ಜಿಲ್ಲೆಗಳಲ್ಲಿ ವಾರಾಂತ್ಯ ಕರ್ಫ್ಯೂ ರದ್ದುಗೊಳಿಸಬೇಕು, ಇಲ್ಲವೇ ನಿಯಮಾವಳಿಗಳನ್ನು ಸಡಿಲಿಸಬೇಕೆಂದು ಇಂದಿನ ಸಭೆಯಲ್ಲಿ ಕೆಲವು ಸಚಿವರುಗಳು ಮನವಿ ಮಾಡಿದ್ದರು ಎಂದಿದ್ದಾರೆ.

ಸದ್ಯಕ್ಕೆ ನಿಯಮಾವಳಿಗಳಲ್ಲಿ ಬದಲಾವಣೆ ಸಾಧ್ಯವಿಲ್ಲ. ಕೊರೊನಾ ಪರಿಸ್ಥಿತಿಯನ್ನು ನೋಡಿಕೊಂಡು, ಜನವರಿ 14 ಇಲ್ಲವೇ (3ನೇ ಪುಟಕ್ಕೆ)

# ವಾರಾಂತ್ಯದ ಪ್ರಯಾಣಕ್ಕೆ ಪ್ರಯಾಸ

## ಸರ್ಕಾರಿ ಬಸ್ ಸೀಮಿತ, ಖಾಸಗಿ ಅನುಮಾನ

ದಾವಣಗೆರೆ, ಜ. 6 - ವಾರಾಂತ್ಯದ ಕರ್ಫ್ಯೂ ಇಂದು ಶುಕ್ರವಾರ ರಾತ್ರಿಯಿಂದ ಆರಂಭವಾಗಲಿದ್ದು, ವಾರಾಂತ್ಯದ ಪ್ರಯಾಣ ಮಾಡುವವರು ಮುನ್ನೆಚ್ಚರಿಕೆ ವಹಿಸುವುದು ಒಳಿತು. ಏಕೆಂದರೆ ಸರ್ಕಾರಿ ಬಸ್‌ಗಳು ವಿರಳವಾಗುವ ಸಾಧ್ಯತೆ ಇದ್ದರೆ, ಖಾಸಗಿ ಬಸ್‌ಗಳು ಬೀದಿಗಿಳಿಯುವುದು ಬಹುತೇಕ ಅನುಮಾನವಾಗಿದೆ.



ಕೊರೊನಾ ಮಾರ್ಗಸೂಚಿಗಳನ್ನು ಪ್ರಕಟಿಸಿರುವ ರಾಜ್ಯ ಸರ್ಕಾರ, ವಾರಾಂತ್ಯದ ಕರ್ಫ್ಯೂ ವೇಳೆ ಬಸ್ ಸಂಚಾರದ ಮೇಲೆ ಸ್ಪಷ್ಟ ನಿಷೇಧ ಹೇರಿಲ್ಲ. ಆದರೆ, ಬೇಡಿಕೆ ನೋಡಿಕೊಂಡು ಅಗತ್ಯವಿರುವಷ್ಟೇ ಬಸ್ ಬಿಡಲು ಕೆ.ಎಸ್.ಆರ್.ಟಿ.ಸಿ. ಸೂಚನೆ ನೀಡಿದೆ. ಆನ್‌ಲೈನ್ ಮೂಲಕ ಆಗುವ ಬುಕಿಂಗ್‌ಗೆ ಅನುಗುಣವಾಗಿ ಬಸ್‌ಗಳನ್ನು ಬಿಡಲು ಸಾರಿಗೆ ಸಂಸ್ಥೆ ನಿರ್ಧರಿಸಿದೆ.

ಮತ್ತೊಂದೆಡೆ, ಕರ್ಫ್ಯೂ ವೇಳೆ ಅನುಮತಿ ಇದ್ದರೂ ಸಾಕಷ್ಟು ಖಾಸಗಿ ಬಸ್‌ಗಳು ಬೀದಿಗಿಳಿಯುವ ಸಾಧ್ಯತೆ ಇಲ್ಲ. ಹೀಗಾಗಿ ಜನರು ವಾರಾಂತ್ಯದ ಕರ್ಫ್ಯೂ ವೇಳೆ ಪ್ರಯಾಣ ಮಾಡಲು ಕಷ್ಟಗಳು (3ನೇ ಪುಟಕ್ಕೆ)

### ಎಂದಿನಂತೆ ಇದ್ದ ಜನಜಂಗುಳಿ

**ಸರ್ಕಾರಿ ಹಾಗೂ ಖಾಸಗಿ ಬಸ್ ನಿಲ್ದಾಣಗಳಲ್ಲಿ ಗುರುವಾರ ಜನಜಂಗುಳಿ ಎಂದಿನಂತೆ ಇದ್ದದ್ದು ಕಂಡು ಬಂತು. ಕೊರೊನಾ ಮಾರ್ಗಸೂಚಿಗಳನ್ನು ಜಾರಿಗೆ ತಂದ ನಂತರವೂ ಬಸ್ ನಿಲ್ದಾಣಗಳಲ್ಲಿ ಜನಸಂದಣಿ ಮೇಲೆ ಯಾವುದೇ ಪರಿಣಾಮವಾಗಿಲ್ಲ. ಆದರೆ, ಬೆಳಿಗ್ಗೆ ಪ್ರಯಾಣಿಕರ ಸಂಖ್ಯೆ ಬಹುತೇಕ ಯಥಾಸ್ಥಿತಿ ಇದ್ದರೂ, ರಾತ್ರಿ ಸಂಚರಿಸುವವರ ಪ್ರಮಾಣ ಕಡಿಮೆಯಾಗಿದೆ ಎಂದು ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಹೆಬ್ಬಾಳ್ ತಿಳಿಸಿದ್ದಾರೆ.**




**ಮಂಗೋಲಿಯಾದಿಂದ ಬಂದ ಪಟ್ಟೆತಲೆ ಹೆಬ್ಬಾತುಗಳು** ಸಾವಿರಾರು ಕಿಲೋ ಮೀಟರ್ ದೂರದ ಮಂಗೋಲಿಯಾದಿಂದ ದಾವಣಗೆರೆ ಸಮೀಪದ ಕೊಂಡಜ್ಜಿ ಕೆರೆಗೆ ಪಟ್ಟೆ ತಲೆ ಹೆಬ್ಬಾತು (ಬಾರ್ ಹೆಡೆಡ್ ಗೂಸ್)ಗಳು ಆಗಮಿಸಿದ್ದು, ಪಕ್ಷಿ ಪ್ರೇಮಿಗಳ ಗಮನ ಸೆಳೆಯುತ್ತಿವೆ.

# ಜಿಲ್ಲಾಭಿವೃದ್ಧಿಗೆ 2,500 ಕೋಟಿ ಅನುದಾನ

## ಹರಿಹರ : 6 ಕೋಟಿ ರೂ. ಕಾಮಗಾರಿಗಳಿಗೆ ಚಾಲನೆ ನೀಡಿದ ಸಂಸದ ಸಿದ್ದೇಶ್ವರ

ಹರಿಹರ, ಜ. 6 - ತಾಲ್ಲೂಕಿನಲ್ಲಿ ಇತ್ತೀಚೆಗೆ ಭಾರೀ ಪ್ರಮಾಣದಲ್ಲಿ ಮಳೆ ಬಂದು ಹಲವಾರು ಗ್ರಾಮಗಳ ರಸ್ತೆಗಳು ಸಂಪೂರ್ಣವಾಗಿ ಹಾನಿಯಾಗಿದ್ದರಿಂದ ಸರ್ಕಾರಕ್ಕೆ ಒತ್ತಾಯ ಮಾಡಿ 6 ಕೋಟಿ ರೂ. ಬಿಡುಗಡೆ ಮಾಡಿಸಿ, ಇಂದು ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ ಎಂದು ಸಂಸದ ಜಿ.ಎಂ. ಸಿದ್ದೇಶ್ವರ ಹೇಳಿದ್ದಾರೆ.


ತಾಲ್ಲೂಕಿನ ಕೊಂಡಜ್ಜಿ ಗ್ರಾಮದಲ್ಲಿ 2 ಕೋಟಿ 25 ಲಕ್ಷ ರೂಪಾಯಿ ವೆಚ್ಚದಲ್ಲಿ ಕೊಂಡಜ್ಜಿ ಮತ್ತು ಗಂಗನರಸಿ ಗ್ರಾಮದ ಸೇತುವೆ ಕಾಮಗಾರಿ ಮತ್ತು ಕೆಂಚನಹಳ್ಳಿ ಗ್ರಾಮದಲ್ಲಿ 20 ಲಕ್ಷ ರೂಪಾಯಿ ವೆಚ್ಚದಲ್ಲಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ಮಾಡುವ ಮೂಲಕ ಚಾಲನೆ ನೀಡಿ, ನಂತರದಲ್ಲಿ ವೇದಿಕೆ (2ನೇ ಪುಟಕ್ಕೆ)



**ಅನುದಾನ ನನ್ನದು, ಪಟಾಕಿ ನಿಮ್ಮದು!**

ಕೊಂಡಜ್ಜಿ-ಗಂಗನರಸಿ ಮಧ್ಯದ ಸೇತುವೆ ನಿರ್ಮಾಣದ ಗುದ್ದಲಿ ಪೂಜೆಗೆ ಶಾಸಕ ಎಸ್. ರಾಮಪ್ಪ ಆಗಮಿಸಿದಾಗ ಅವರ ಅಭಿಮಾನಿಗಳು ಪಟಾಕಿ ಸಿಡಿಸಿದರು. ಇದಕ್ಕೆ ಸಂಸದ ಜಿ.ಎಂ. ಸಿದ್ದೇಶ್ವರ ಅವರು, ಅನುದಾನ ತಂದು ಅಭಿವೃದ್ಧಿ ಮಾಡಿಸುವುದು ನಾನು. ಆದರೆ, ಜನರು ಮಾತ್ರ ನಿಮಗೆ ಪಟಾಕಿ ಸಿಡಿಸಿ ಸ್ವಾಗತಿಸುತ್ತಾರೆ ! ಎಂತಹ ಕಾಲ ನೋಡಿ ರಾಮಪ್ಪ ಎಂದು ನಗುತ್ತಾ ಹೇಳಿದರು.

# ರಾಂಪುರ ಹಾಲಸ್ವಾಮಿ ಮಠದ ಉತ್ತರಾಧಿಕಾರಿ ನೇಮಕ



**ಕಾಶಿ ಪೀಠದ ಜಗದ್ಗುರುಗಳ ಅಧ್ಯಕ್ಷತೆಯಲ್ಲಿ 9 ಶಿವಾಚಾರ್ಯ ಸದಸ್ಯರ ಸಮಿತಿ ರಚನೆಗೆ ತೀರ್ಮಾನ**

ಹೊನ್ನಾಳಿ, ಜ.6 - ಬುಧವಾರ ಯಾವುದೇ ತೀರ್ಮಾನ ಕೈಗೊಳ್ಳದೇ ಅಪೂರ್ಣಗೊಂಡಿದ್ದ ತಾಲ್ಲೂಕಿನ ರಾಂಪುರ ಹಾಲಸ್ವಾಮಿ ಮಠದ ಉತ್ತರಾಧಿಕಾರಿ ಸಭೆಯನ್ನು ಇಂದು ಕಾಶಿ ಜಗದ್ಗುರುಗಳ ಸಮ್ಮುಖದಲ್ಲಿ ನಡೆಸಲಾಯಿತು.

ವಿವಿಧ ಮಠಗಳ ಶಿವಾಚಾರ್ಯರು ಹಾಗು ಭಕ್ತರು, ಮಠದ ವಂಶಸ್ಥರ ನೇತೃತ್ವದಲ್ಲಿ ಉತ್ತರಾಧಿಕಾರಿ ಆಯ್ಕೆಯ ಬಗ್ಗೆ ಅನೇಕ ಸಾಧಕ ಬಾಧಕಗಳ ಕುರಿತು ಚರ್ಚೆಯಾಗಿ ಅಂತಿಮವಾಗಿ ಒಂದು ಮಾರ್ಗೋಪಾಯದ ತೀರ್ಮಾನ ಕೈಗೊಂಡು ಮಠದ ವಿವಿಧ ಹಂತದ ಸುಧಾರಣೆ ಕಾಪಾಡಿಕೊಳ್ಳುವ ಬಗ್ಗೆ ಚರ್ಚಿಸಿ ಪಲ್ಲಕ್ಕಿ ಅಜ್ಜಯನ ಅಪ್ಪಣೆಯಂತೆ ಪರಿಹಾರ ಕಂಡುಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಸಭೆಯಲ್ಲಿ ಚರ್ಚೆಗೊಂಡ ಪ್ರಮುಖ ವಿಷಯಗಳು ಮಠದ ವಂಶಸ್ಥರ ಉತ್ತರಾಧಿಕಾರ, ಯೋಗ್ಯ ಜಾತಕ ಆಧರಿಸಿ ಆಯ್ಕೆ ಇದೇ ಫೆಬ್ರವರಿ ತಿಂಗಳಲ್ಲಿ ಪಟ್ಟಾಧಿಕಾರ, ಹಿಂದಿದ್ದ ಆಡಳಿತ ಅಧಿಕಾರಿಯೇ ತಾತ್ಕಾಲಿಕವಾಗಿ ಮುಂದುವರಿಕೆ, ಮಠದ ಮೇಲ್ವಿಚಾರಣಾ ಸಮಿತಿಗೆ 9 ಶಿವಾಚಾರ್ಯ ಸದಸ್ಯರ ಸಮಿತಿ ರಚನೆ, ಸಭೆಯಲ್ಲಿ ಮಠಗಳಿಗೆ ಒಂದು ಮೇಲ್ವಿಚಾರಣಾ ಸಮಿತಿ ಸಹ ಮಾಡಲು (2ನೇ ಪುಟಕ್ಕೆ)



# ತಿಪಟೂರು ಸಿದ್ದರಾಮ ಜಯಂತಿ ರದ್ದು

ಮಲೇಬೆನ್ನೂರು, ಜ.6- ತಿಪಟೂರಿನಲ್ಲಿ ಇದೇ ದಿನಾಂಕ 14 ರಂದು ಹಮ್ಮಿಕೊಂಡಿದ್ದ ಶ್ರೀ ಗುರು ಸಿದ್ದರಾಮೇಶ್ವರರ 849ನೇ ಜಯಂತಿ ಮಹೋತ್ಸವವನ್ನು (2ನೇ ಪುಟಕ್ಕೆ)


## ಗೋಪನಾಳು ಸಣ್ಣ ಕಲ್ಲಪ್ಪರ ಎಸ್.ಬಿ.ನಾಗರಾಜಪ್ಪ ನಿಧನ



ದಾವಣಗೆರೆ ತಾ. ಗೋಪನಾಳು ಗ್ರಾಮದ ವಾಸಿ

**ಸಣ್ಣ ಕಲ್ಲಪ್ಪನವರ ಎಸ್.ಬಿ.ನಾಗರಾಜಪ್ಪ** (68 ವರ್ಷ)

ಅವರು ದಿನಾಂಕ 06.01.2022ರ ಗುರುವಾರ ಸಂಜೆ 7.35ಕ್ಕೆ ನಿಧನರಾಗಿದ್ದಾರೆ. ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 07.01.2022ರ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಗೋಪನಾಳು ಗ್ರಾಮದಲ್ಲಿ ನೆರವೇರಲಿದೆ.

ಇಂತಿ ದುಃಖತಪ್ತ ಕುಟುಂಬ ವರ್ಗ : 81050-77639



## 8ನೇ ವರ್ಷದ ಪುಣ್ಯಸ್ಮರಣೆ



ಜನನ: 31-07-1951

ಲಿಂಗೈಕ್ಯ: 07-01-2014

ದಾವಣಗೆರೆ ಸ್ವಾಮಿ ವಿವೇಕಾನಂದ ಬಡಾವಣೆಯ ವಾಸಿ ವಿಜಯ ಬ್ಯಾಂಕ್ ನಿವೃತ್ತ ನೌಕರರಾಗಿದ್ದ

**ಲಿಂ॥ ಕಕ್ಕರಗೊಳ್ಳ ಗೌಡ್ರು ಲೋಕೇಶ್ವರಪ್ಪ**

ಇವರು ಶಿವೈಕ್ಯರಾಗಿ ಇಂದಿಗೆ ಎಂಟು ವರ್ಷಗಳಾದವು. ಸದಾ ಅವರ ಆದರ್ಶ, ಮಾರ್ಗದರ್ಶನಗಳ ಸ್ಮರಣೆಯಲ್ಲಿರುವ

ಪತ್ನಿ : ಶ್ರೀಮತಿ ಕುಸುಮ ಲೋಕೇಶ್ವರಪ್ಪ, ದಾವಣಗೆರೆ

ಪುತ್ರ: ಶ್ರೀ ವೀರೇಶ್ ಪಟೇಲ್, ಕಾರ್ಯದರ್ಶಿ, ಡಾ. ಅಂಜು, ಜಂಟಿ ಕಾರ್ಯದರ್ಶಿ, ದವನ್ ಕಾಲೇಜ್, ಹಾಗೂ ಪುಟಾಣಿ ಅನವ್

ಪುತ್ರಿ : ಶ್ರೀಮತಿ ವಿನುತ ಪಟೇಲ್, ಡಾ. ಹರೀಶ್ ಬಿ.ಜಿ, ಸಂಯೋಜನಾಧಿಕಾರಿ, ಎಂ.ಸಿ.ಎ. ವಿಭಾಗ, ಯುಬಿಡಿಟಿ ಕಾಲೇಜ್ ಮಾ॥ ಪೂರ್ವಿಕ್

ಸಹೋದರರಾದ : ಶ್ರೀ ಕೆ.ಜಿ. ಬಸವನಗೌಡ್ರು, ಶ್ರೀಮತಿ ದ್ರಾಕ್ಷಾಯಣಮ್ಮ, ಕಕ್ಕರಗೊಳ್ಳ.

ಶ್ರೀಮತಿ ಗಿರಿಜಮ್ಮ, ದಿ॥ ಕೆ.ಜಿ.ಪರಮೇಶ್ವರಪ್ಪ, ದಾವಣಗೆರೆ ಶ್ರೀ ಕೆ. ಜಿ. ವೀರಬಸಪ್ಪ, ಶ್ರೀಮತಿ ಮಹಾಲಕ್ಷ್ಮಿ, ದಾವಣಗೆರೆ.

ಮತ್ತು ಸಹೋದರಿಯರು ಹಾಗೂ ಮಕ್ಕಳು, ಗೌಡ್ರು ಮನೆತನದವರು ಹಾಗೂ ಬಂಧು-ಮಿತ್ರರು, ಕಕ್ಕರಗೊಳ್ಳ.

ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು

ಪಟೇಲ್ ವೀರಪ್ಪ ಸ್ಕೂಲ್, ಕಕ್ಕರಗೊಳ್ಳ ಮತ್ತು ದವನ್ ಕಾಲೇಜ್, ದಾವಣಗೆರೆ

ವಿಜಯ ಬಳಗದ ಸ್ನೇಹಿತರು, ದಾವಣಗೆರೆ

PVS

Spurthi Educational Trust (R) DAVAN

# ಹಳ್ಳಿಗಳಲ್ಲಿ ಮೌಢ್ಯ ವಿನಾಶದ ಕ್ರಾಂತಿಯಾದಾಗ ಪ್ರಗತಿ ಸಾಧ್ಯ

ಮಲೇಬೆನ್ನೂರು, ಜ.6- ಮೌಢ್ಯವನ್ನು ಬಹಳವಾಗಿ ವಿರೋಧಿಸಿದ ಬುದ್ಧ, ಬಸವ, ಅಂಬೇಡ್ಕರ್ ಅವರ ಹೆಸರನ್ನು ಸ್ಮಶಾನಕ್ಕೆ ನಾಮಕರಣ ಮಾಡಿರುವುದು ಶ್ಲಾಘನೀಯ ಎಂದು ನಿವೃತ್ತ ಪ್ರಾಧ್ಯಾಪಕ ಡಾ. ಎಂ.ಬಿ. ರಾಮಚಂದ್ರಪ್ಪ ಹೇಳಿದರು.



ಉಕ್ಕಡಗಾತ್ರಿ ಗ್ರಾಮದಲ್ಲಿ ಇಂದು ಹಮ್ಮಿಕೊಂಡಿದ್ದ ಸಾರ್ವಜನಿಕ ರುದ್ರ ಭೂಮಿಗೆ ಬುದ್ಧ, ಬಸವ, ಅಂಬೇಡ್ಕರ್ ಮುಕ್ತಿಧಾಮ ಎಂಬ ನಾಮಫಲಕ ಅನಾವರಣ ಮತ್ತು ಸಸಿ ನೆಡುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಸಮಾಜದಲ್ಲಿ ಅನೇಕರು ಮೌಢ್ಯಕ್ಕೆ ಒಳಗಾಗಿ ಮನೆ - ಸಂಪತ್ತು, ಊರು - ಕೇರಿ ಕಳೆದುಕೊಂಡಿದ್ದಾರೆ. ಅಂತಹ ಮೌಢ್ಯ ವಿನಾಶದ ಕ್ರಾಂತಿ ಪ್ರತಿ ಹಳ್ಳಿಯಲ್ಲೂ ಆಗಬೇಕು. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ ನಮ್ಮ ಹಣೆ ಬರಹವನ್ನು ನಾವೇ ಬರೆದುಕೊಳ್ಳಬೇಕೆಂದ ರಾಮಚಂದ್ರಪ್ಪ ಅವರು, ದೇವರ ಹೆಸರಿನಲ್ಲಿ ನಡೆಯುತ್ತಿರುವ ಬೆತ್ತಲು ಸೇವೆ, ವೇಶ್ಯಾವಾಟಿಕೆ ವಿರುದ್ಧ ಜನ ಜಾಗೃತಿರಾಗಬೇಕೆಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಹೈಕೋರ್ಟಿನ ವಕೀಲ ಅನಂತ್‌ನಾಯ್ಕ, ಜಾತಿ, ಧರ್ಮಗಳ ಸಂಕೋಲೆಗಳನ್ನು ಮೀರಿ ತತ್ವ - ನೀತಿಗಳನ್ನು ತುಂಬಿದ ಬುದ್ಧ - ಬಸವ - ಅಂಬೇಡ್ಕರ್ ಅವರು ಜೀವ ಪ್ರೀತಿ, ಮನುಷ್ಯ ಪ್ರೀತಿಯನ್ನು ಕಲಿಸಿಕೊಟ್ಟಿದ್ದಾರೆ. ಯಾವುದು ಮೌಢ್ಯ, ಯಾವುದು ಅಧ್ಯಾತ್ಮ ಎಂಬುದು ಗೊತ್ತಿಲ್ಲದೆ, ಅನೇಕ ಜನ ಮೋಸಕ್ಕೆ ಒಳಗಾಗುತ್ತಿದ್ದಾರೆ. ಮೂಢನಂಬಿಕೆ ಮೀರಿದ ವಿಚಾರ ಧಾರೆಗಳನ್ನು ಸತೀಶ್ ಜಾರಕಿಹೊಳಿ ಅವರು ಮಾನವ ಬಂಧುತ್ವ ವೇದಿಕೆ ಮೂಲಕ ಸಮಾಜಕ್ಕೆ ತಿಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದರ ಪರಿಣಾಮದಿಂದಾಗಿ ಉಕ್ಕಡಗಾತ್ರಿಯಲ್ಲಿ ಸ್ಮಶಾನಕ್ಕೆ ಬುದ್ಧ - ಬಸವ - ಅಂಬೇಡ್ಕರ್ - ಮುಕ್ತಿಧಾಮ ಸ್ಥಾಪನೆ ಆಗಿದೆ ಎಂದು ಅನಂತ್‌ನಾಯ್ಕ ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀ ಗುರು ಕರಿಬಸವೇಶ್ವರ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಎಸ್.ಸುರೇಶ್ ಮಾತನಾಡಿ, ಗ್ರಾಮದಲ್ಲಿ ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು, ಜನರು ಮೌಢ್ಯದಿಂದ ಹೊರಬರಲು ಸಹಕಾರಿಯಾಗಲಿದೆ ಎಂದರು.

ಎಪಿಎಂಸಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್ ಮಾತನಾಡಿ, ಭೂಮಿ ಇರುವವರೆಗೂ ಬುದ್ಧ, ಬಸವ, ಅಂಬೇಡ್ಕರ್ ಅವರ ವಿಚಾರ ಧಾರೆಗಳು ಜೀವಂತವಾಗಿರುತ್ತವೆ ಎಂದರು.

ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ವಾಸನದ ಎಸ್. ಕೆ.ಬಸವರಾಜ್, ವೈದ್ಯ ಜಿಗಳಿಯ ಡಾ. ಎನ್. ನಾಗರಾಜ್, ಗ್ರಾ.ಪಂ. ಕಾರ್ಯದರ್ಶಿ ಮಹೇಶ್ವರಪ್ಪ, ಮಲೇಬೆನ್ನೂರು ಪುರಸಭೆ ಸದಸ್ಯ ಸಾಬೀರ್ ಅಲಿ ಮಾತನಾಡಿದರು.

> “ದೇವರ ಬಗ್ಗೆ ಗೊತ್ತಿಲ್ಲ ಎಂದವರು ಬುದ್ಧರಾದರೆ ಸ್ವರ್ಗ, ನರಕ, ಗುಡಿ - ಗುಂಡಾರ ನಿರಾಕರಿಸಿ ಕಾಯಕವೇ ಕೈಲಾಸ ಎಂದವರು ಬಸವಣ್ಣ. ಇವರಿಬ್ಬರ ಚಿಂತನೆಗಳನ್ನು ಸಾಮಾಜಿಕರಿಸಿದವರು ಡಾ. ಅಂಬೇಡ್ಕರ್.
> - ಡಾ. ಎ.ಬಿ. ರಾಮಚಂದ್ರಪ್ಪ

ಗ್ರಾ.ಪಂ. ಅಧ್ಯಕ್ಷರಾದ ಶ್ರೀಮತಿ ಕರಿಬಸಮ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗ್ರಾ.ಪಂ. ಉಪಾಧ್ಯಕ್ಷರಾದ ಶ್ರೀಮತಿ ದೇವೇಂದ್ರಪ್ಪ, ಸದಸ್ಯರಾದ ಶಿವಪೂಜಿ ಭರಮಗೌಡ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಸುವರ್ಣಮ್ಮ, ಮರಿಯಮ್ಮ, ಚಂದ್ರಮ್ಮ, ಗೋವಿನಹಾಳ್ ಚಂದ್ರಪ್ಪ, ತಾಲ್ಲೂಕು ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಹರಿಹರದ ಜನಪರ ಹೋರಾಟಗಾರ ಹರೀಶ್ ನೋಟದ್, ಗ್ರಾಮದ ಪದ್ಮಪ್ಪ ಪೂಜಾರ್, ಗದಿಗೆಪ್ಪ, ಎ.ಕೆ. ಮಾಯಪ್ಪ, ನಾಗಪ್ಪ ದೋಣಿ, ಭರಮಪ್ಪ ಕಟಿಗೇರ ಮತ್ತಿತರರು ಈ ವೇಳೆ ಹಾಜರಿದ್ದರು.

ಮಾನವ ಬಂಧುತ್ವ ವೇದಿಕೆಯ ಮಂಜು ದೊಡ್ಮನಿ ಸ್ವಾಗತಿಸಿದರು. ಜನತಾವಾಣಿ ವರದಿಗಾರ ಜಿಗಳಿ ಪ್ರಕಾಶ್ ವಂದಿಸಿದರು.

# ಜಿಲ್ಲಾಭಿವೃದ್ಧಿಗೆ 2,500 ಕೋಟಿ ಅನುದಾನ

(1ನೇ ಪುಟದಿಂದ) ಸಮಾರಂಭದಲ್ಲಿ ಮಾತನಾಡುತ್ತಿದ್ದರು.

ಹರಿಹರ ತಾಲ್ಲೂಕಿನ ಸ್ಥಳೀಯ ಕಾರ್ಯ ಕರ್ತರು ಮತ್ತು ಮುಖಂಡರು ಹಾನಿಯಾಗಿ ರುವ ರಸ್ತೆಗಳನ್ನು ದುರಸ್ತಿಪಡಿಸುವಂತೆ ಮನವಿ ಮಾಡಿಕೊಂಡಿದ್ದರಿಂದಾಗಿ, ಸರ್ಕಾರಕ್ಕೆ ಬಹಳ ಒತ್ತಾಯ ಮಾಡಿ ಪ್ರಕೃತಿ ವಿಕೋಪ ಪರಿಹಾರದ ಅಡಿಯಲ್ಲಿ 6 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಹೇಳಿದರು.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ಅಡಿಯಲ್ಲಿ 21 ಕೋಟಿ ರೂ. ವೆಚ್ಚದಲ್ಲಿ 25 ಕಿಲೋಮೀಟರ್ ರಸ್ತೆಗಳ ಕಾಮಗಾರಿ ಮಾಡಲಾಗಿದೆ. ಎಕ್ಕೆಗೊಂದಿ - ಭಾನುವಳ್ಳಿ ರಸ್ತೆ ದುರಸ್ತಿ ಪಡಿಸುವುದರ ಜೊತೆಗೆ ಸಿರಿಗೆರೆ ಕ್ರಾಸ್‌ನಿಂದ ರಸ್ತೆ ಅಭಿವೃದ್ಧಿಗೆ 1 ಕೋಟಿ ರೂ. ಅನುದಾನ ಬಿಡುಗಡೆ ಆಗಿದೆ. ಜಲಜೀವನ್ ಮಿಷನ್ ಅಡಿಯಲ್ಲಿ 73 ಗ್ರಾಮಗಳಿಗೆ ನೀರು ಸರಬರಾಜು ಮಾಡಲು 35 ಕೋಟಿ ರೂ. ಹಣ ಬಿಡುಗಡೆಯಾಗಿದೆ. ಈ ಪೈಕಿ 2020-21ನೇ ಸಾಲಿನಲ್ಲಿ 7 ಕೋಟಿ ರೂ.ಗಳ ಕಾಮಗಾರಿ ಪ್ರಗತಿ ಹಂತದಲ್ಲಿದೆ ಎಂದು ಹೇಳಿದರು.

ನೀರಾವರಿ ಅಭಿವೃದ್ಧಿ ನಿಗಮದಿಂದ 3 ಕೋಟಿ ರಸ್ತೆ ಅಭಿವೃದ್ಧಿಗೆ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಜಿಲ್ಲೆಯ ಅಭಿವೃದ್ಧಿಗೆ ಇಲ್ಲಿಯವರೆಗೆ 2,500 ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಮಾಡಲಾಗಿದೆ. ಕೊಂಡಜ್ಜಿ ಗ್ರಾಮದ ಹಿರಿಯ ರಾಜಕೀಯ ಮುತ್ಸದ್ಧಿ ಕೊಂಡಜ್ಜಿ ಬಸಪ್ಪನವರ ಸಮಾಧಿ ಮುಂದಿನ ರಸ್ತೆಯನ್ನು ಕೇಂದ್ರ ಸಚಿವರಾದ ಅಮಿತ್ ಷಾ ಬರುವ ಸಮಯದಲ್ಲಿ ದುರಸ್ತಿ ಪಡಿಸಲಾಗಿದೆ ಹೇಳಿದರು.

ಶಾಸಕ ಎಸ್. ರಾಮಪ್ಪ ಮಾತನಾಡಿ, ಚುನಾವಣೆ ಸಮಯ ಬಂದಾಗ ರಾಜಕೀಯ ಮಾಡೋಣ. ಆದರೆ, ತಾಲ್ಲೂಕಿನ ಅಭಿವೃದ್ಧಿ ವಿಚಾರ ಬಂದಾಗ ನಾವೆಲ್ಲರೂ ಒಗ್ಗಟ್ಟಿನಿಂದ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸೋಣ ಎಂದರು.


ತಾಲ್ಲೂಕಿನಲ್ಲಿ ಇತ್ತೀಚೆಗೆ ಮಳೆ ಬಂದು ಬಹಳ ರಸ್ತೆಗಳು ಹಾನಿಯಾಗಿವೆ. ಇವುಗಳ ಅಭಿವೃದ್ಧಿಗೆ ಸಂಸದರ ಜೊತೆಗೂಡಿ ಶ್ರಮಿಸುತ್ತಿದ್ದೇನೆ. ಈಗಾಗಲೇ ಎಕ್ಕೆಗೊಂದಿ-ಭಾನುವಳ್ಳಿ ರಸ್ತೆ ಕಾಮಗಾರಿ ಟೆಂಡರ್ ಹಂತದಲ್ಲಿ ಇದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕೊಂಡಜ್ಜಿ ಗ್ರಾ.ಪಂ. ಅಧ್ಯಕ್ಷ ಗಂಗಾಧರಪ್ಪ, ಜಿಪಂ ಮಾಜಿ ಸದಸ್ಯ ವಾಗೀಶ್ ಸ್ವಾಮಿ, ಗಿರೀಶ್ ಪ್ರಭು ಕೊಂಡಜ್ಜಿ, ಗ್ರಾಮಾಂತರ ಘಟಕದ ಬಿಜೆಪಿ ಅಧ್ಯಕ್ಷ ಲಿಂಗರಾಜ್ ಹಿಂಡಸಘಟ್ಟ ಮತ್ತಿತರರು ಉಪಸ್ಥಿತರಿದ್ದರು.

## ಮಲೇಬೆನ್ನೂರು ಇಂದು ಸಭೆ

ಪುರಸಭೆಯ ಆಯವ್ಯಯವನ್ನು ತಯಾರಿಸುವ ಕುರಿತು ಇಂದು ಬೆಳಿಗ್ಗೆ 11 ಕ್ಕೆ ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಸಾರ್ವಜನಿಕ ಸಮಾಲೋಚನಾ ಸಭೆ ನಡೆಯಲಿದೆ.

## ಅನುದಾನಕ್ಕೆ ಸಿಎಂ ಬಳಿ ರಾಮಪ್ಪ ಮನವಿ



ಹರಿಹರ, ಜ.5 - ಶಾಸಕ ಎಸ್. ರಾಮಪ್ಪ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿಗಳ ಕಚೇರಿಯಲ್ಲಿ ಭೇಟಿ ಮಾಡಿ, ಹರಿಹರ ವಿಧಾನಸಭಾ ಕ್ಷೇತ್ರದ ವಿವಿಧ ಯೋಜನೆಗಳಿಗೆ ಅನುದಾನ ಬಿಡುಗಡೆಗೊಳಿಸಲು ವಿನಂತಿಸಿಕೊಂಡಿದ್ದಾರೆ. ಈ ವಿಚಾರಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಶೀಘ್ರವೇ ಅನುದಾನ ಬಿಡುಗಡೆಗೊಳಿಸುವುದಾಗಿ ಭರವಸೆ ನೀಡಿದ್ದಾರೆ.

# ಸೋಲು-ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಗುಣ ಹೊಂದಲು ಕರೆ



### ಹರಿಹರ : ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್‌ಗೆ ಚಾಲನೆ ನೀಡಿದ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್

ಹರಿಹರ, ಜ. 6 - ಕ್ರೀಡಾಪಟುಗಳು ಗೆದ್ದಾಗ ಹಿಗ್ಗದೇ ಸೋತಾಗ ಕುಗ್ಗದೇ, ಸೋಲು ಮತ್ತು ಗೆಲುವು ಎರಡನ್ನೂ ಸಮಾನವಾಗಿ ಸ್ವೀಕರಿಸುವ ಗುಣಗಳನ್ನು ಹೊಂದಬೇಕು ಎಂದು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹೇಳಿದ್ದಾರೆ.

ನಗರದ ಗಾಂಧಿ ಮೈದಾನದಲ್ಲಿ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಹುಟ್ಟು ಹಬ್ಬದ ನಿಮಿತ್ಯ ನಡೆಯುತ್ತಿರುವ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಮೆಂಟ್ ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಹಾವಳಿ ಹೆಚ್ಚಾಗಿ ಮಕ್ಕಳು ಕ್ರೀಡಾ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿಯನ್ನು ತೋರಿಸುವುದು ಕಡಿಮೆಯಾಗಿದೆ. ಜೊತೆಗೆ ಈ ಕೊರೊನಾ ರೋಗವು ಸಹ ಬಂದಾಗಿನಿಂದ ಇನ್ನಷ್ಟು ಕ್ರೀಡೆಗಳು ನಡೆಯುವುದು ಸಹ ಅಷ್ಟಕಷ್ಟೇ ಆಗಿವೆ ಎಂದವರು ಹೇಳಿದರು.

ಹಿಂದಿನ ಕಾಲದಲ್ಲಿ ಮನೆಗೊಬ್ಬರು ಕ್ರೀಡಾಪಟುಗಳು ಸಿಗುತ್ತಿದ್ದರು. ಅವರು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ತಮ್ಮದೇ ಆದ ವಿಶಿಷ್ಟ ಸಾಧನೆಯನ್ನು ಮಾಡಿದರು. ಕಾಲ ಬದಲಾವಣೆ ಆದಂತೆ ಬಡಾವಣೆಗೆ ಒಬ್ಬರು ಕ್ರೀಡಾಪಟುಗಳು ಸಿಗುವುದು ಕಷ್ಟವಾಗಿದೆ. ಹಾಗಾಗಿ ಸರ್ಕಾರ ಕ್ರೀಡೆಗಳು ನಶಿಸಿ ಹೋಗುವುದಕ್ಕಿಂತ ಮುಂಚಿತವಾಗಿ ಕ್ರೀಡೆಗಳು ನಿರಂತರವಾಗಿ ನಡೆಯುವುದಕ್ಕೆ ಪ್ರೋತ್ಸಾಹ ನೀಡುವುದಕ್ಕೆ ಮುಂದಾಗಬೇಕು ಎಂದು ಶಿವಶಂಕರ್ ತಿಳಿಸಿದರು.

ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯ ಸುಧಾರಣೆಗೆ ತರಬಹುದು. ಆರೋಗ್ಯ ಚೆನ್ನಾಗಿದ್ದರೆ ಮಾತ್ರ ರೀತಿಯ ಸಾಧನೆ ಮಾಡಬಹುದಾಗಿದೆ. ಇದರಿಂದ ಸಾರ್ವಜನಿಕರು ಹೆಚ್ಚು ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳುವಂತೆ ಹೇಳಿದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷರಾದ ರತ್ನ ಡಿ. ಉಜ್ಜೇಶ್, ಸದಸ್ಯರಾದ ಅಲ್ತಾಫ್, ಮುಖಂಡರಾದ ಅಂಗಡಿ ಮಂಜುನಾಥ್, ಅಮರಾವತಿ ನಾಗರಾಜ್, ಲತಾ ಕೊಟ್ರೇಶ್, ಹೆಚ್ ಸುಧಾಕರ್, ಕುಮಾರ್, ಮಹೇಶ್, ವಸಂತ್ ಕುಮಾರ್ ಉಪಸ್ಥಿತರಿದ್ದರು.

# ಮಠದ ಉತ್ತರಾಧಿಕಾರಿ ನೇಮಕ ಇತ್ಯರ್ಥ



(1ನೇ ಪುಟದಿಂದ) ಭಕ್ತರು ಸಮ್ಮತಿಸಿದ್ದು, ಈ ಸಮಿತಿಗೆ ಕಾಶಿಪೀಠದ ಜಗದ್ಗುರು ಶ್ರೀ ಡಾ.ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅಧ್ಯಕ್ಷರಾಗಬೇಕು, ಹೊಟ್ಯಾಪುರ ಮಠದ ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಹೊನ್ನಾಳಿ ಹಿರೇಕಲ್ಮಠದ ಶ್ರೀ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಬುಕ್ಕಸಾಗರದ ಶ್ರೀ ಕರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಹಿರೇಹಡಗಲಿಯ ಶ್ರೀ ಹಾಲುವೀರಪ್ಪಜ್ಜ ಸ್ವಾಮೀಜಿ ಒಳಗೊಂಡಂತೆ ರಾಂಪುರ, ಬಸವಾಪಟ್ಟಣ, ಗುಂಡೇರಿ ಗ್ರಾಮದ ತಲಾ ಒಬ್ಬ ಗ್ರಾಮಸ್ಥರನ್ನೊಳಗೊಂಡ 9 ಜನರ ಕಮಿಟಿ ಇದಾಗಿರಬೇಕು. ಸದ್ಯದಲ್ಲಿಯೇ ಈ ಕಮಿಟಿ ರಚನೆಯಾಗಬೇಕು ಎಂದು ತೀರ್ಮಾನಿಸಲಾಗಿದೆ.

ಸಭೆಯಲ್ಲಿ ಹೊನ್ನಾಳಿ ಹಿರೇಕಲ್ಮಠದ ಶ್ರೀ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಹೊಟ್ಯಾಪುರ ಹಿರೇಮಠದ ಶ್ರೀ ಗಿರಿಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಅಳವಂಡಿ ಮಠದ ಶ್ರೀ ಮರುಳುಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ, ಕೊಟ್ಟೂರು ಜಾನಕೋಟಿ ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಹಿರೇಹಡಗಲಿ ಶ್ರೀ ಹಾಲುವೀರಪ್ಪಜ್ಜ ಸ್ವಾಮೀಜಿ, ರಾಂಪುರ ಹಾಲಸ್ವಾಮಿ ಮಠದ ಶಾಖಾ ಮಠದ ಹತ್ತಾರು ಮಠಾಧೀಶರು ಉಪಸ್ಥಿತರಿದ್ದರು.

# ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಹೆಬ್ಬಾಳು, ಆರಾಧ್ಯ ಕೈಗಾರಿಕೆ, ನೀರ್ಥಡಿ, ಶಿವಪುರ, ಹಾಲುವರ್ತಿ, ಗಂಗನಕಟ್ಟೆ, ನೇರ್ಲಗಿ, ಕೊಗ್ಗನೂರು, ಚಿನ್ನಸಮುದ್ರ, ಆನಗೋಡು ಹಾಗೂ ಸುತ್ತಮುತ್ತಲಿನ ಗ್ರಾಮಗಳು ಮತ್ತು ತೋಳಹುಣಸೆ, ಕುರ್ಕಿ, ಕಬ್ಬೂರು, ಗೋಪನಾಳ್, ಕಂದಗಲ್ಲು, ಬಾಡ ಅತ್ತಿಗೆರೆ, ಅತ್ತಿಗೆರೆ, ಹನುಮನಹಳ್ಳಿ, ಹಿರೇತೊಗಲೇರಿ, ರಾಮಗೊಂಡನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳು ಹಾಗೂ ಬಿ.ದುರ್ಗ, ದಿಂಡದಹಳ್ಳಿ, ನರಗನಹಳ್ಳಿ, ಮಾಯಕೊಂಡ, ಬುಳ್ಳಾಪುರ, ಕೊಡಗನೂರು, ಹೆಚ್.ಬಸಾಪುರ, ಬಾಡ ಮಾಯಕೊಂಡ, ನಲ್ಕುಂದ, ಬೊಮ್ಮೇನಹಳ್ಳಿ, ಬಾವಿಹಾಳು, ಅಣಬೇರು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ 5 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

## ಹರಿಹರದಲ್ಲಿಂದು ವಿದ್ಯುತ್ ಇಲ್ಲ

ಹರಿಹರದ ಬೈಪಾಸ್ ಏರಿಯಾ, ಶಿವಮೊಗ್ಗ ರಸ್ತೆ, ಹೊನ್ನಮ್ಮ ಲೇ-ಔಟ್, ಹರಿಹರೇಶ್ವರ ಲೇ-ಔಟ್ ಸುತ್ತಮುತ್ತ, ಎಪಿಎಂಸಿ ಆವರಣ, ಗಂಗಾನಗರ, ಕೈಲಾಸ ನಗರ, ಹಳ್ಳದಕೇರಿ, ತಹಶೀಲ್ದಾರ್ ಓಣಿ, ತೆಗ್ಗಿನಕೇರಿ, ನಾಗಪ್ಪ ಸರ್ಕಲ್, ಹರಿಹರೇಶ್ವರ ದೇವಸ್ಥಾನದ ಆವರಣ, ಬಹಾರ್ ಮಕಾನ್, ಶಿವಮೊಗ್ಗ ರಸ್ತೆ ಚರ್ಚ್ ಏರಿಯಾ, ಟೆಂಪಲ್ ರೋಡ್, ಶ್ರೀಕಾಂತ್ ಟಾಕಿಸ್ ಏರಿಯಾ, ಊರಮ್ಮ ದೇವಸ್ಥಾನ, ವಿದ್ಯಾನಗರ, ಕಾಳಿದಾಸ ನಗರ, ಬೆಂಕಿನಗರ, ಪ್ರಶಾಂತ ನಗರ, ವಿಆರ್‌ಎಲ್ ರಸ್ತೆ, ಜ್ಯೋತಿರ್ ಮಠ, ಗಂಗಪ್ಪ ವಠಾರ, ಇಂದಿರಾ ನಗರ, ರಾಜಾರಾಮ್ ಕಾಲೋನಿ, ಅಬ್ದುಲ್ ಕಲಾಂ ಶಾಲೆ ಸುತ್ತ-ಮುತ್ತ, ಶುಗರ್ ಫ್ಯಾಕ್ಟರಿ ರಸ್ತೆ, ಕೋಳಿ ಫಾರಂ, ಚಾನಲ್ ಹತ್ತಿರ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ತಿಪಟೂರು ಸಿದ್ದರಾಮ ಜಯಂತಿ ರದ್ದು

(1ನೇ ಪುಟದಿಂದ) ಕೋವಿಡ್ ಕಾರಣದಿಂದಾಗಿ ರದ್ದುಪಡಿಸಲಾಗಿದೆ ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ಮತ್ತು ಸ್ವಾಗತ ಸಮಿತಿ ಅಧ್ಯಕ್ಷ ತಿಪಟೂರಿನ ಮಧು ತಿಳಿಸಿದ್ದಾರೆ. ಅದೇ ದಿನ ಕೆರೆಗೋಡಿ-ರಂಗಾಪುರ ಸುಕ್ಷೇತ್ರದಲ್ಲಿ ಸಾಂಪ್ರದಾಯಕವಾಗಿ ಸಿದ್ದರಾಮ ಜಯಂತಿಯನ್ನು ಶ್ರೀ ಗುರು ಪರದೇಶಿಕೇಂದ್ರ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಗಳಿಯ ಇಂದೂಧರ್ 'ಜನತಾವಾಣಿ'ಗೆ ತಿಳಿಸಿದ್ದಾರೆ.


**ಮಹಿಳಾ ಪಿ.ಜಿ.**
ವಿದ್ಯಾರ್ಥಿನಿಯರಿಗೆ ಹಾಗೂ ಉದ್ಯೋಗಸ್ಥ ಮಹಿಳೆಯರಿಗೆ ಊಟ ಮತ್ತು ವಸತಿ ವ್ಯವಸ್ಥೆ ಇರುವ ಮಹಿಳಾ ಪಿ.ಜಿ. ಸೌಲಭ್ಯವಿದೆ. ಸಂಪರ್ಕಿಸಿ: "ಮೀನಾಕ್ಷಿ ಭವನ" ಆಂಜನೇಯ ಬಡಾವಣೆ, ಆಂಜನೇಯ ದೇವಸ್ಥಾನದ ಹತ್ತಿರ, ದಾವಣಗೆರೆ.
90601 72745

**ಭದ್ರಾ ನ್ಯಾಚುರಲ್ಸ್**
ಸಾವಯವ/ನೈಸರ್ಗಿಕ ಕಿರಾಣಿ, ಆಯುರ್ವೇದಿಕ್ ಔಷಧಿಗಳು, ರೋಗ ನಿರೋಧಕ ಶಕ್ತಿ ವರ್ಧಕಗಳು ಒಂದೇ ಸೂರಿನಡಿ ಲಭ್ಯ. ಸಮಯ: ಬೆಳಿಗ್ಗೆ 10 ರಿಂದ ರಾತ್ರಿ 9ರವರೆಗೆ
ಭದ್ರಾ ನ್ಯಾಚುರಲ್ಸ್
ಮೆಡ್‌ಪ್ಲಸ್ ಎದುರು, ರಾಂ ಅಂಡ್ ಕೋ ಸರ್ಕಲ್
94483 23796

**ಮನೆಗಳು ಮಾರಾಟಕ್ಕಿವೆ**
40x60 North, 3BHK, ಕುವೆಂಪು ಬಡಾವಣೆಯಲ್ಲಿ, 30x40 West, 2BHK ಜಯನಗರದಲ್ಲಿ, 30x40 West ಮೇಲೆ ಕೆಳಗೆ ಮಹಾಲಕ್ಷ್ಮಿ ಲೇಔಟ್‌ನಲ್ಲಿ
ರಿಯಲ್ ಎಸ್ಟೇಟ್ ಏಜೆಂಟ್ ಐನಳ್ಳಿ ಚನ್ನ ಬಸಪ್ಪ
99166 12110

**ಬೇಕಾಗಿದ್ದಾರೆ**
1. ದಾವಣಗೆರೆಯಲ್ಲಿ ಮನೆ ಮತ್ತು ಹೊರಗಿನ ಕೆಲಸ ಮಾಡಲು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಹೊಂದಿರಬೇಕು)
2. ಹೊಲದಲ್ಲಿ ಇದ್ದುಕೊಂಡೇ ಕೆಲಸ ಮಾಡಲು ಓರ್ವ ಆಳು ಬೇಕಾಗಿದ್ದಾರೆ.
3. ಹರಿಹರದ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
70185 88900, 95388 70257

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ 8500/- ಊಟ, ರೂಂ, ಉಚಿತ.
97400 98047, 97400 98064

**ಮನೆ ಬಾಡಿಗೆಗೆ ಇದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್, ಮಲ್ಲಿಗೆ ಹೆಲ್ತ್ ಸೆಂಟರ್ ಬಿಲ್ಡಿಂಗ್, ಆಫೀಸ್ ಅಥವಾ ಕ್ಲಿನಿಕ್‌ಗೆ ಬಾಡಿಗೆಗೆ ಇದೆ.
77955 07876

**3BHK ಮನೆ ಲೀಸ್/ಬಾಡಿಗೆಗೆ**
ಎಂ.ಸಿ.ಸಿ. 'ಎ' ಬ್ಲಾಕ್, ಸಾಯಿಬಾಬಾ ದೇವಸ್ಥಾನದ ರಸ್ತೆಯಲ್ಲಿ 3 ಬೆಡ್‌ರೂಂ ಇರುವ ಕಮರ್ಷಿಯಲ್ ಉದ್ದೇಶಕ್ಕೆ, ಕ್ಲಿನೀಕ್, ಬ್ಯಾಂಕ್, ಆಫೀಸ್ ಇತರೆ ಆಫೀಸ್‌ಗಳಿಗೆ ಅನುಕೂಲವಾಗಿರುವ ಮನೆ ಲೀಸ್‌ಗೆ ಅಥವಾ ಬಾಡಿಗೆಗೆ ಇದೆ. ಸಂಪರ್ಕಿಸಿ
98442 59343
99869 46030

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಸ್ವಂತ ಬೈಕ್, ಡಿ.ಎಲ್. ಹೊಂದಿರುವ ಕನ್ನಡ, ಇಂಗ್ಲಿಷ್, ಹಿಂದಿ ಓದಲು ಬರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ. (ಪಾರ್ಟ್ ಟೈಮ್ & ಫುಲ್ ಟೈಮ್)
99161 20125
99649 53137

**House To-Let**
2BHK 'Santrupthi'
# 1640/66-67, Saraswati Badavane, Davanagere.
Veg only
94484 46708

**ಸೈಟ್ ಮಾರಾಟಕ್ಕಿದೆ**
50x80 ಅಳತೆಯ ಸೈಟ್ ಜಯನಗರ ಲಿಂಕ್ ರಸ್ತೆಗೆ ಕೂಡುವ ಪಶ್ಚಿಮಕ್ಕೆ 45 ಅಡಿಯ ಮೇನ್ ರೋಡ್ ಹಾಗೂ ಪೂರ್ವದ ಹಿಂಬದಿಗೆ 30 ಅಡಿಯ ಸಿಸಿ ರಸ್ತೆ ಹೊಂದಿದೆ. ನಿಟುವಳ್ಳಿ, ದಾವಣಗೆರೆ.
86608 09919
90607 90962

**ಮತ್ಸ್ಯದ ಮನೆ**
ಮನೆಯಲ್ಲಿಯೇ ತಯಾರಿಸಿದ ಮೀನಿನ ಆಹಾರಕ್ಕಾಗಿ ಸಂಪರ್ಕಿಸಿ
95133 14666
(ಹೋಂ ಡೆಲಿವರಿ ಮಾತ್ರ)

**WANTED**
Required female telecallers for backend procss and telecalling work candidate should be fleunt in english and computer knowledge. Candidate should be sell loans, insurence, credit cards salary-6,000/- plus incentive
99805 70746

**WANTED**
1. Order Booking Boy
2. Delivery Boys
A.K.TRADERS
Ashirwad
Bapuji Hospital Road
P.J Extension, Davangere-4.

**ಹೆಸರು ಬದಲಾವಣೆ**
ಷಂಶುದ್ದೀನ್ ಆದ ನಾನು ತಿಳಿಸುವುದೇನೆಂದರೆ DIನಲ್ಲಿ ನನ್ನ ಹೆಸರು ಷಂಶು ಎಂದು ತಪ್ಪಾಗಿ ನಮೂದಾಗಿರುತ್ತದೆ. ಆದ ಕಾರಣ ದಿನಾಂಕ : 4.1.2022 ರಂದು ನೋಟರಿಯವರ ಸಮ್ಮುಖದಲ್ಲಿ ನನ್ನ ಹೆಸರು ಷಂಶುದ್ದೀನ್ ಎಂದು ಬದಲಾಯಿಸಿಕೊಂಡಿರುತ್ತೇನೆ. ನನ್ನ ಎಲ್ಲಾ ವ್ಯವಹಾರಗಳು ಈ ಹೆಸರಿನಲ್ಲೇ ಮುಂದುವರೆಯುತ್ತವೆ.

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
90080 55813

**ಬೇಕಾಗಿದ್ದಾರೆ**
Sales Excutive For General Insurance Serivce in Davanagere Distc & Taluqs
ಸಂಪರ್ಕಿಸಿ: ಎ.ಎಸ್.ಕೆ. ಅಸೋಸಿಯೇಟ್ಸ್
General Insurance Serivces
70190 29749, 78299 62555

**ಮನೆ ಕಟ್ಟುವವರಿಗೆ ಸಿಹಿ ಸುದ್ದಿ**
ಸಂಕ್ರಾಂತಿವರೆಗೆ ಬಿಲ್ಡಿಂಗ್ ಪ್ಲಾನ್ಸ್ ಉಚಿತವಾಗಿ ಕೊಡಲಾಗುವುದು. (T&C)
ಕಲ್ಪತರು ಕನ್‌ಸ್ಟ್ರಕ್ಷನ್, ದಾವಣಗೆರೆ.
ಇಂಜಿನಿಯರ್ ಮತ್ತು ಕಾಂಟ್ರಾಕ್ಟರ್ಸ್
ಮೊ. : 98455 83340

**ಈಶ್ವರಿ ತರಬೇತಿ ಕೇಂದ್ರ**
ಫ್ಯಾಷನ್ ಡಿಸೈನಿಂಗ್ & ಟೈಲರಿಂಗ್ ಕೋರ್ಸ್
ಸಮಯ: ಬೆಳಿಗ್ಗೆ 10 ರಿಂದ 3ರವರೆಗೆ
ಶ್ರೀ ಜಗದ್ಗುರು ರೇಣುಕ ಕೃಪಾ
# 2798 ಜಿ. ಕ್ರಾಸ್, 3ನೇ ಮೇನ್, ಎಸ್.ಎಸ್. ಲೇಔಟ್ 'ಬಿ' ಬ್ಲಾಕ್, ದಾವಣಗೆರೆ
97316 50435
95358 15543

**TEACHERS WANTED**
We look for trained and untrained teachers with fluency in English for the following subject. English, Maths, Science, Social, Hindi, Kannada, Computer Science
Sri Gurukula CBSE Residential School
Lokikere Road, Thuruchagatta Village, Davangere.
7338604512, 73386 04513

**WANTED**
WORKING PHARMACIST
Qualification : D. Pharma/B. Pharma, Age Below 30 Years, Salary Scale : Rs.12000 to 16000
ಕಾವೇರಿ ಮೆಡಿಹೌಸ್ ಪ್ರೈ. ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-2.

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**DHUDA APPROVED SITES FOR SALE**
20x40, 20x30, 30x40 at Harihar
Cell: 80504 91952

**Dog Boarding**
ನೀವು ವಿದೇಶಕ್ಕೆ ಹೋಗಲಿದ್ದೀರಾ, ಆರೋಗ್ಯ ಸರಿ ಇಲ್ವಾ ಮನೆಯಲ್ಲಿ ಮಕ್ಕಳು ಇರುವುದರಿಂದ ನಿಮ್ಮ ಪ್ರೀತಿಯ ನಾಯಿಯನ್ನು ನೋಡಿಕೊಳ್ಳಲು ಆಗುತ್ತಿಲ್ಲವೇ, ಹಾಗಿದ್ದರೆ ನಿಮ್ಮ ಪ್ರೀತಿಯ ನಾಯಿಯನ್ನು ನಮ್ಮ ಬಳಿ ಬಿಡಿ. ನಾವು ನಿಮ್ಮ ಪ್ರೀತಿಯ ನಾಯಿ ಆಹಾರ, ಆರೋಗ್ಯ ಮತ್ತು ವಸತಿ ಸಂಪೂರ್ಣ ನಮ್ಮ ಜವಾಬ್ದಾರಿ.
ಆವರಗೆರೆ ಹತ್ತಿರ, SP ಲೇಔಟ್ ದಾವಣಗೆರೆ.
98444 92134

**LAND FOR SALE**
5 Gunta, 10 Gunta, 1 Acre, 2 Acre, 3 Acre
80886 73838

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**JOBS**
Sales Manager/Executives
Any Degree (English, Computer Knowledge)
Office Job/Marketing/ Field Work, Male/Female Freshers/Experienced
98444 92888

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree Courses, Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 94837 64859

**ಮನೆ ಬಾಡಿಗೆಗೆ ಇದೆ**
2 BHK, Ground Floor/Second Floor, ಮುನ್ಸಿಪಲ್ ಹಾಗೂ ಬೋರ್ ನೀರು ಸೌಕರ್ಯ ಇದೆ. #686, ಶ್ರೀ ರಾಮ ನಿವಾಸ ಪಿ.ಜೆ ಬಡಾವಣೆ 8ನೇ ಮುಖ್ಯ ರಸ್ತೆ, ಲೂರ್ಡ್ಸ್ ಬಾಯ್ಸ್ ಶಾಲೆ ಹತ್ತಿರ ದಾವಣಗೆರೆ.
87926 62185
96325 55910

**ಜಮೀನು ಮಾರಾಟಕ್ಕಿದೆ**
ಹರಿಹರದಲ್ಲಿ 8.5 ಗುಂಟೆ ಜಮೀನು, ಮನೆ ಮಾರಾಟಕ್ಕಿದೆ. (ಹರಿಹರ-ದಾವಣಗೆರೆ ರಸ್ತೆ ಹತ್ತಿರ)
74112 50447

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮನೆ ಮಾರಾಟಕ್ಕಿದೆ**
ಜಯನಗರ ಎ ಬ್ಲಾಕ್‌ನಲ್ಲಿರುವ ಕಾಳಿದಾಸ ಸರ್ಕಲ್ ಹಿಂಭಾಗ ಕಾರ್ನರ್ ಪಶ್ಚಿಮ ದಿಕ್ಕಿನಲ್ಲಿರುವ (30×40) ಎರಡು ಅಂತಸ್ತಿನ ಸುಸಜ್ಜಿತ ವ್ಯವಸ್ಥೆಯ ಹೊಸ ಮನೆ ಮಾರುವುದಿದೆ. ಡೋರ್ ನಂ.790/6/176
94827 64316

**ಬೇಕಾಗಿದ್ದಾರೆ**
Vacancy for field officer / marketing executive With minimum experience of 2 years & age above 30. (Only for males) Contact us
96068 47121

**ಲಿಂಗಾಯಿತ ವಧು ಬೇಕಾಗಿದೆ**
ಲಿಂಗಾಯತ, 35 ವರ್ಷದ ಸಾಫ್ಟ್‌ವೇರ್ ಇಂಜಿನಿಯರ್ ಒಳ್ಳೆಯ ಕುಟುಂಬದ ವರನಿಗೆ ಯಾವುದೇ ಪದವಿ ಪಡೆದ ಸೂಕ್ತ ವಧು ಬೇಕಾಗಿದೆ.
ಮೊ: 98807 29108

**ಬಾಡಿಗೆ/ ಲೀಸ್‌ಗೆ**
2 ಬೆಡ್‌ರೂಂ, ಅಟ್ಯಾಚ್ ಬಾತ್‌ರೂಂವುಳ್ಳ 4 ಮನೆಗಳು ಕುಂದುವಾಡ ಕೆರೆ ಹತ್ತಿರ ಮಹಾಲಕ್ಷ್ಮಿ ಲೇಔಟ್‌ನಲ್ಲಿ ಲಭ್ಯವಿರುತ್ತವೆ. (ಸಂಗಮ್ ಅಪಾರ್ಟ್‌ಮೆಂಟ್‌ನಲ್ಲಿ)
96388 17967
73380 43912

**WANTED**
Social teacher for high School. Qualification : B.A. B.Ed (Ladies only)
Sri Sathya Sai English Medium School
Nituvalli, Davanagere
95358 85997

**ಸಂಘ-ಸಂಸ್ಥೆಗಳ, ಟ್ರಸ್ಟ್‌ಗಳ**
GST & INCOME TAX
ನೋಂದಣಿ, ನವೀಕರಣ, ಆಡಿಟ್ ಮಾಡಿಕೊಡುತ್ತೇವೆ.
94838 62779

**ಜೀವನ ಸಂಗಾತಿ**
ಲಿಂಗಾಯತ, 52 ವರ್ಷದ ಲೆಕ್ಚರರ್, ವಿಚ್ಛೇದಿತನಿಗೆ, ವಿಧವೆ, ವಿಚ್ಛೇದಿತ ಜೀವನ ಸಂಗಾತಿ ಬೇಕಾಗಿದೆ.
ಮೊ: 98807 29108


**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್, ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮ ವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ.
ಕುಡುಕರ ಅರಿವಿಲ್ಲದೆ ಕುಡಿತ ಬಿಡಿಸಲಾಗುವುದು.
ದಾವಣಗೆರೆ
ಮೊ : 8133933804

**URGENT REQUIREMENT FMCG STUBCART GROUPS DAVANGERE**
1) Telecallers for female - 4 posts available qualification SSLC, PUC or any Degree. Salary 6000 to 7000+ sales incentives.
2) Teritory sales mangere - position 2 posts available, any degree for male candidate, salary 10,000 to 13,000+Sales Incentives.
3) Tata Ace Driver Cum Delivery-4 posts salary 10,000 to 16,000, DL Compulsory.
CONTACT : 80884 16991

|| ಶ್ರೀ ಕಡೂರು ವೀರಭದ್ರೇಶ್ವರ ಸ್ವಾಮಿ ಪ್ರಸನ್ನ || || ಶ್ರೀ ಕೈದಾಳೆ ಮಲ್ಲಿಕಾರ್ಜುನ ಸ್ವಾಮಿ ಪ್ರಸನ್ನ ||
**ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ**

ದಾವಣಗೆರೆ ಸಿಟಿ ಎಂಸಿಸಿ 'ಬಿ' ಬ್ಲಾಕ್ ವಾಸಿ
ಶ್ರೀ ಎಂ.ವಿ. ರಾಜು ಕೈದಾಳೆ ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 03.01.2022ನೇ ಸೋಮವಾರ ಬೆಳಗಿನ ಜಾವ 3.15ಕ್ಕೆ ನನ್ನ ಪೂಜ್ಯ ತಾಯಿಯವರಾದ
ಶ್ರೀಮತಿ ಶಾರದಮ್ಮ ಮೋತಿ
(ಲಿಂ. ಸಿ. ವೀರಭದ್ರಪ್ಪ ಮೋತಿ ಕೈದಾಳೆ ಇವರ ಧರ್ಮಪತ್ನಿ)
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಾಗಣಾರಾಧನೆಯನ್ನು
ದಿನಾಂಕ 7.01.2022 ನೇ ಶುಕ್ರವಾರ ಬೆಳಿಗ್ಗೆ 11.30ಕ್ಕೆ ದಾವಣಗೆರೆ ಸಿಟಿ ಎಂಸಿಸಿ 'ಬಿ' ಬ್ಲಾಕ್ ಸ್ವಿಮ್ಮಿಂಗ್ ಪೂಲ್ ಹತ್ತಿರ # 2973/2, 6ನೇ ಮೇನ್, ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುತ್ತಾರೆ, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ಇಂತಿ ದುಃಖತಪ್ತರು: ಶ್ರೀ ಎಂ.ವಿ. ರಾಜು ಕೈದಾಳೆ, ಮಗಳು, ಅಳಿಯ, ಸೊಸೆ ಹಾಗೂ ಮೊಮ್ಮಕ್ಕಳು ಮತ್ತು ಮೋತಿ ವಂಶಸ್ಥರು ಹಾಗೂ ಬಂಧು-ಮಿತ್ರರು

# ಪದವಿಯಲ್ಲಿ ಐಚ್ಛಿಕ ವಿಷಯ ಓದದವರಿಗೆ ನೇಮಕಾತಿಯಲ್ಲಿ ಅನ್ಯಾಯ: ನ್ಯಾಯಕ್ಕೆ ಮೊರೆ

ರಾಣೇಬೆನ್ನೂರು, ಜ.6- ಸ್ನಾತಕೋತ್ತರ ಎನ್‌ಇಟಿ, ಕೆಎಸ್ ಇಟಿ, ಪಿಎಚ್‌ಡಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಸಹಾಯಕ ಪ್ರಾಧ್ಯಾಪಕರಾಗುವ ಕನಸು ಕಾಣುತ್ತಿದ್ದ ಸಾವಿರಾರು ಯುವಕರಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ತಂದ ಹೊಸ ನಿಯಮ ತಣ್ಣೀರು ಎರಚಿದಂತಾಗಿದ್ದು ಈ ನಿಯಮವನ್ನು ಬದಲಾಯಿಸುವ ಅವಶ್ಯವಿದೆ. ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿರುವುದಾಗಿ ಇಸ್ಮಾಯಿಲ್ ಐರಣಿ ತಿಳಿಸಿದ್ದಾರೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 1242 ಸಹಾಯಕ ಪ್ರಾಧ್ಯಾಪಕರ ಸ್ಥಾನಗಳಿಗೆ ನೇಮಕ ಮಾಡಲು ಅರ್ಜಿ ಕರೆಯಲಾಗಿತ್ತು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಸಮೀಪಿಸುತ್ತಿದ್ದಂತೆ, ಅರ್ಹ ಪರೀಕ್ಷೆಗಳು ಪಾಸಾಗಿದ್ದರೂ ಪದವಿಯಲ್ಲಿ ಐಚ್ಛಿಕ ಒಂದೇ ವಿಷಯ ಓದದವರು ನೇಮಕಾತಿಗೆ ಅರ್ಹರಾಗುವುದಿಲ್ಲ ಎನ್ನುವ ಪ್ರಾಧಿಕಾರದ ಹೊಸ ನಿಯಮದಿಂದ ಅನ್ಯಾಯವಾಗಲಿದೆ ಎಂದವರು ಹೇಳಿದರು.

ಈ ಸಮಸ್ಯೆಯ ವ್ಯಾಪ್ತಿಯಲ್ಲಿ ಸಹಪ್ರಾಧ್ಯಾಪಕರಾಗುವ ಕನಸು ಕಾಣುತ್ತಿರುವ ಯುವಕರು ತಮಗೆ ಆಗುತ್ತಿರುವ ಅನ್ಯಾಯ ಸರಿಪಡಿಸಿಕೊಳ್ಳಲು ಸಂಘಟಿತರಾಗಬೇಕಾಗಿದೆ. ಆ ದಿಶೆಯಲ್ಲಿ ಪ್ರಯತ್ನ ನಡೆಸಿರುವ ನನ್ನ 9980860514 ಮತ್ತು ರವಿಪ್ರಕಾಶ 6363454265 ಸಂಪರ್ಕಿಸುವಂತೆ ಇಸ್ಮಾಯಿಲ್ ಕೋರಿದ್ದಾರೆ.

**ಜೆಸಿ ಸಂಸ್ಥೆ ಬೆಂಬಲ:** ಹಳೆಯ ವಿದ್ಯಾರ್ಥಿಗಳಿಗೆ ಮೊದಲಿನ ವ್ಯವಸ್ಥೆಯನ್ನ ಜಾರಿಗೊಳಿಸಿ, ಬರುವ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳಿಗೆ ಹೊಸ ನಿಯಮ ಅನ್ವಯಿಸುವಂತೆ ಸರ್ಕಾರ ಆದೇಶಿಸಬೇಕು ಎಂದು ಇಲ್ಲಿನ ಜೆಸಿ ಸಂಸ್ಥೆಯ ಈಗಿನ ಅಧ್ಯಕ್ಷ ವೆಂಕಟೇಶ್ ಕಾಕಿ ಹಾಗೂ ಹಿಂದಿನ ಅಧ್ಯಕ್ಷ ಪ್ರಕಾಶ್ ಗಚ್ಚಿನಮಠ ಒತ್ತಾಯಿಸಿದ್ದಾರೆ

## ಶಿಕ್ಷಕಿ ಸಾವಿತ್ರಿಬಾಯಿ ಫುಲೆ ಜಯಂತಿ



ದಾವಣಗೆರೆ,ಜ.6- ದೇಶದ ಪ್ರಥಮ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಪುಲೆ ಅವರ ಜಯಂತಿಯನ್ನು ಆಚರಿಸಲಾಯಿತು. ಶ್ರೀಮತಿ ನಳಿನ ಪವಾರ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯರಾದ ಕೃಷ್ಣೋಜಿರಾವ್ ಸಾವಂತ್, ಗೋಪಾಲರಾವ್ ಸಾವಂತ್, ಹನುಮಂತರಾವ್ ಸುರ್ವೆ, ಗಣೇಶರಾವ್, ಚೇತನಾಬಾಯಿ, ವಿಜಯ ಪಿಸಾಳೆ ಭಾಗವಹಿಸಿದ್ದರು.

## ನಿಟುವಳ್ಳಿಯಲ್ಲಿಂದು ಪುನೀತ್ ಪುತ್ಥಳಿ ಉದ್ಘಾಟನೆ

ಕರುನಾಡ ರತ್ನ ಪುನೀತ್ ರಾಜಕುಮಾರ್ ಅಭಿಮಾನಿ ಬಳಗದಿಂದ ನಿಟುವಳ್ಳಿಯ ಚಿಕ್ಕನಹಳ್ಳಿ ಹೊಸ ಬಡಾವ ಣೆಯಲ್ಲಿ ಇಂದು ಬೆಳಿಗ್ಗೆ 9 ಗಂಟೆಗೆ ಪುನೀತ್ ಪುತ್ಥಳಿ ಉದ್ಘಾಟನೆ ಮತ್ತು ಅನ್ನ ಸಂತರ್ಪಣೆ ಕಾರ್ಯಕ್ರಮ ಹಾಗೂ ಸಂಜೆ 6 ಕ್ಕೆ ಪುನೀತ್ ಗೀತ ನಮನ ಕಾರ್ಯಕ್ರಮ ಆಯೋಜಿಸಲಾಗಿದೆ.

# ವೀಕೆಂಡ್ ಕರ್ಫ್ಯೂ ಕಡ್ಡಾಯವಾಗಿ ಪಾಲಿಸಿ : ಜಿಲ್ಲಾಧಿಕಾರಿ ಅನಿರುದ್ಧ

**ಹರಪನಹಳ್ಳಿ**

ಹರಪನಹಳ್ಳಿ, ಜ.6- ರಾಜ್ಯ ಸರ್ಕಾರ ಆದೇಶಿಸಿರುವ ವೀಕೆಂಡ್ ಕರ್ಫ್ಯೂವನ್ನು ಕಡ್ಡಾಯವಾಗಿ ಪಾಲಿಸಿ ಕೊರೊನಾ ಮೂರನೇ ಅಲೆ ನಿಯಂತ್ರಿಸಲು ಸಹಕರಿಸಿ ಎಂದು ವಿಜಯನಗರ ಜಿಲ್ಲಾಧಿಕಾರಿ ಅನಿರುದ್ಧ ಪಿ. ಶ್ರವಣ್ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಕೊರೊನಾ ಮೂರನೇ ಅಲೆ ರಾಜ್ಯ ಸೇರಿದಂತೆ ಜಿಲ್ಲೆಯಲ್ಲಿ ಉಲ್ಬಣವಾಗುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಗುರುವಾರ ಭೇಟಿ ನೀಡಿದ ಅವರು, ಆಸ್ಪತ್ರೆಯಲ್ಲಿನ ಔಷಧಿ, ಆಕ್ಸಿಜನ್, ಹಾಸಿಗೆ, ವೈದ್ಯರು ಹಾಗೂ ಸಿಬ್ಬಂದಿಗಳ ಮಾಹಿತಿ ಪಡೆದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಅವರು, ರಾಜ್ಯದಲ್ಲಿ ಮೂರನೇ ಅಲೆ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಅದನ್ನು ಸಮರ್ಥವಾಗಿ ಎದುರಿಸಲು ಔಷಧಿ, ಆಕ್ಸಿಜನ್, ಹಾಸಿಗೆ, ವೈದ್ಯರು ಹಾಗೂ ಸಿಬ್ಬಂದಿಗಳ ಮಾಹಿತಿ ಪಡೆಯಲು ಭೇಟಿ ನೀಡಿದ್ದು ಜಿಲ್ಲೆಗೆ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶ ಅನ್ವಯವಾಗಲಿದ್ದು, ರ‍್ಯಾಲಿ, ಪ್ರತಿಭಟನೆ, ಮದುವೆ ಸಮಾರಂಭಗಳಿಗೆ ಕೋವಿಡ್ ನಿಯಮ ಅನ್ವಯವಾಗಲಿದೆ ಎಂದರು. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿನ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಕೊರತೆ ಇರುವ ಕಾರಣ ತಜ್ಞ ವೈದ್ಯರ ನೇಮಕ ಮಾಡಿಕೊಳ್ಳಲಾಗುವುದು ಎಂದರು.

ಈ ವೇಳೆ ಉಪವಿಭಾಗಾಧಿಕಾರಿ ಹೆಚ್.ಜಿ.ಚಂದ್ರಶೇಖರಯ್ಯ, ತಹಶೀಲ್ದಾರ್ ಎಲ್.ಎಂ.ನಂದೀಶ್, ತಾಲ್ಲೂಕು ವೈದ್ಯಾಧಿಕಾರಿ ಹಾಲಸ್ವಾಮಿ ಹಾಗೂ ಆಡಳಿತಾಧಿಕಾರಿ ಶಿವಕುಮಾರ್ ಮತ್ತು ಇತರರು ಉಪಸ್ಥಿತರಿದ್ದರು.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಇಲ್ಲ

ಆವರಗೆರೆ, ಬಾಡಾ ಕ್ರಾಸ್, ಬಸಾಪುರ, ಹಳೇಚಿಕ್ಕನಹಳ್ಳಿ, ಹೊಸಚಿಕ್ಕನಹಳ್ಳಿ, ಐಗೂರು, ವಡ್ಡಿನಹಳ್ಳಿ, ಹೊನ್ನೂರು, ಎಚ್.ಕಲ್ಪನಹಳ್ಳಿ, ಮಲ್ಲಶೆಟ್ಟಿಹಳ್ಳಿ, ಕರಿಲಕ್ಕೇನಹಳ್ಳಿ ಮತ್ತು ಚಟ್ಟೋಬನಹಳ್ಳಿ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 6.30 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ. ಕಾಡಜ್ಜಿ, ನಾಗರಕಟ್ಟೆ, ರಾಂಪುರ, ಬಸವನಾಳ್, ಬಸವನಾಳ್ ಗೊಲ್ಲರಹಟ್ಟಿ, ಬೇತೂರು, ಪುಟಗನಾಳ್ ಮತ್ತು ರೆಡ್ಡಿ ಕ್ಯಾಂಪ್ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಆರೋಗ್ಯ ಸುಸ್ಥಿತಿಯಲ್ಲಿರಲು ಸೂರ್ಯ ನಮಸ್ಕಾರ ನೆರವು



ಹೊನ್ನಾಳಿ, ಜ. 6- ಜಗತ್ತಿನ ಸಮಸ್ತ ಜೀವಿಗಳ ಅಸ್ತಿತ್ವಕ್ಕೆ ಕಾರಣವಾಗಿರುವ ಸೂರ್ಯನಿಗೆ ಯಾವುದೇ ಜಾತಿ, ಧರ್ಮವಿಲ್ಲ. ದೈಹಿಕ, ಮಾನಸಿಕ ಮತ್ತು ಅಧ್ಯಾತ್ಮಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ನೆರವಾಗುವ ಪುರಾತನ ಭಾರತೀಯ ವ್ಯಾಯಾಮಗಳಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿರುವುದು ಸೂರ್ಯ ನಮಸ್ಕಾರ. ಇದಕ್ಕೆ ವೇದ ಕಾಲದಿಂದಲೂ ತನ್ನದೇ ಆದ ಮಹತ್ವವಿದೆ ಎಂದು ಯೋಗ ಶಿಕ್ಷಕ ಮಹೇಂದ್ರ ಬಳಿಗಾರ್ ತಿಳಿಸಿದರು.

ತಾಲ್ಲೂಕಿನ ಹನುಮಸಾಗರದ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹೊನ್ನಾಳಿ ಪತಂಜಲಿ ಯೋಗ ಸಮಿತಿಯವರಿಂದ ಏರ್ಪಡಿಸಿದ್ದ 75 ಕೋಟಿ ಸೂರ್ಯ ನಮಸ್ಕಾರದ 21 ನೇ ದಿನದ ಅಭಿಯಾನದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಉಸಿರಾಟದ ವಿನ್ಯಾಸಕ್ಕೆ ಅನುಗುಣವಾಗಿ ಲಯಬದ್ಧ ರೀತಿಯಲ್ಲಿ ಸಂಯೋಜನೆಗೊಂಡಿರುವ ವಿಶಿಷ್ಟ ಆಸನವಾಗಿರುವ ಸೂರ್ಯ ನಮಸ್ಕಾರ ಎಲ್ಲಾ ಆಸನಗಳಿಗಿಂತಲೂ ಸರ್ವಶ್ರೇಷ್ಠವಾದದ್ದು. ವಿವಿಧ ಆಸನಗಳ ಬದಲಿಗೆ ಮುಂಜಾನೆ ಸೂರ್ಯ ನಮ ಸ್ಕಾರ ಮಾಡುವುದರಿಂದ ನಮಗೆ ಅಧಿಕ ಲಾಭವಿದೆ ಎನ್ನುತ್ತಾರೆ ತಜ್ಞರು. ಸೂರ್ಯ ನಮಸ್ಕಾರ ಮಾಡುವ ವೈಜ್ಞಾನಿಕ ವಿಧಾನವನ್ನು ಇಲ್ಲಿ ಸುಲಭವಾಗಿ ಅರ್ಥ ವಾಗುವ ಹಾಗೆ ತಿಳಿಸಲಾಗಿದೆ. ಇದನ್ನು ನೋಡಿ ಕೊಂಡು, ಸರ್ವಾಂಗೀಣ ಆರೋಗ್ಯಕ್ಕಾಗಿ ಪ್ರತಿನಿತ್ಯ ಸೂರ್ಯ ನಮಸ್ಕಾರ ಮಾಡಬಹುದು. ಯೋಗದ ಅವಿಭಾಜ್ಯ ಅಂಗವಾಗಿರುವ ಸೂರ್ಯ ನಮಸ್ಕಾರವು 12 ಆಸನಗಳನ್ನು ಒಳಗೊಂಡಿರುವ ಒಂದೇ ಆಸನ ವಾಗಿದೆ ಎಂದು ಮಹೇಂದ್ರ ಬಳಿಗಾರ್ ತಿಳಿಸಿದರು.

ಈ ಸಂದರ್ಭದಲ್ಲಿ ಯೋಗ ಶಿಕ್ಷಕರಾದ ಸುರೇಶ್, ಚಂದ್ರಪ್ಪ, ಉಮೇಶ್, ಶಾಲೆಯ ಮುಖ್ಯ ಶಿಕ್ಷಕ ಕೆ.ಜಿ. ಚಂದ್ರಪ್ಪ, ಸಹ ಶಿಕ್ಷಕರಾದ ಆರ್. ಜ್ಯೋತಿ, ಹೆಚ್. ಲಲಿತಮ್ಮ, ಎಸ್. ಬಸವರಾಜಪ್ಪ, ಎಂ. ಶ್ರೀಕಾಂತ ಉಪಸ್ಥಿತರಿದ್ದರು.

# ಸಂಸ್ಥೆಗಳಿಗೆ 3,885 ಕೋಟಿ ಬಿಡುಗಡೆ

**(1ನೇ ಪುಟದಿಂದ)** ಮತ್ತು ನೈರ್ಮಲ್ಯ ಇಲಾಖೆಯಿಂದ ಗ್ರಾಮೀಣ ಮನೆಗಳಿಗೆ ನಲ್ಲಿ ನೀರು ಸಂಪರ್ಕ ಒದಗಿಸಲು 9152 ಕೋಟಿ ರೂ.ಗಳ ಯೋಜನೆಗೆ ಅನುಮೋದನೆ ನೀಡಲಾಗಿದೆ. ಈ ಹಣದಲ್ಲಿ ರಾಜ್ಯ ಸರ್ಕಾರ ಶೇ. 45 ರಷ್ಟು, ಕೇಂದ್ರ ಸರ್ಕಾರ ಇದೇ ಪ್ರಮಾಣದಲ್ಲಿ ಹಣ ನೀಡಲಿದೆ. ಇನ್ನು ಸ್ಥಳೀಯ ಸಂಸ್ಥೆಗಳು ಶೇಕಡ 10 ರಷ್ಟು ಭರಿಸಬೇಕು.

ಯೋಜನೆಯನ್ನು ತ್ವರಿತವಾಗಿ ಕೈಗೆತ್ತಿಕೊಂಡು ಗ್ರಾಮೀಣ ಭಾಗದ ಎಲ್ಲಾ ಮನೆಗಳಿಗೆ ನಲ್ಲಿ ನೀರು ಒದಗಿಸುವ ಉದ್ದೇಶದಿಂದ ಸರ್ಕಾರದ ಪಾಲಿನ ಹಣವನ್ನು ನಬಾರ್ಡ್‌ನಿಂದ ಸಾಲ ಪಡೆಯಲು ಇಲಾಖೆಗೆ ಅನುಮತಿ ನೀಡಲಾಗಿದೆ ಎಂದರು.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಜೋಗ್ ಜಲಪಾತದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಐಷಾರಾಮಿ ಹೋಟೆಲ್ ಮತ್ತು ಶರಾವತಿ ನದಿಗೆ ಅಡ್ಡಲಾಗಿ ರೋಪ್‌ವೇ ಅನ್ನು 116 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದೆ.

ದಾವಣಗೆರೆಯ ದೇವಾಂಗ ಸಂಘಕ್ಕೆ ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಾಯ್ದಿರಿಸಲಾಗಿದ್ದ ಮೂಲ ನಿವೇಶನವನ್ನು ಮಂಜೂರು ಮಾಡಿದ್ದು, ಪ್ರಾಧಿಕಾರ ಪಾವತಿಸಬೇಕಾಗಿರುವ ಮೊತ್ತದಲ್ಲಿ ರಿಯಾಯಿತಿ ನೀಡಲು ಸಮ್ಮತಿಸಿದೆ.

ಚಿತ್ರನಟ ದಿವಂಗತ ಅಂಬರೀಷ್ ಸ್ಮಾರಕವನ್ನು ಕೈಗೆತ್ತಿಕೊಳ್ಳಲು 12 ಕೋಟಿ ರೂ. ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಕಂಠೀರವ ಸ್ಟುಡಿಯೋ ಆವರಣದಲ್ಲಿ ಡಾ. ರಾಜ್‌ಕುಮಾರ್ ಅವರ ಸ್ಮಾರಕದ ಬದಿಯಲ್ಲೇ ಇರುವ ಪ್ರದೇಶದಲ್ಲಿ ಈ ಸ್ಮಾರಕವನ್ನು ನಿರ್ಮಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

## ಬಿಎಸ್‌ಸಿ ವತಿಯಿಂದ ಎಂ.ರಾಜೀವ್‌ಗೆ ಅಭಿನಂದನೆ



ದಾವಣಗೆರೆ, ಜ.6- ಐಪಿಎಸ್ ಅಧಿಕಾರಿಯಾಗಿ ಬಡ್ತಿ ಹೊಂದಿದ ಜಿಲ್ಲಾ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾಗಿದ್ದ ಎಂ.ರಾಜೀವ್ ಅವರನ್ನು ಬಿ.ಎಸ್. ಚನ್ನಬಸಪ್ಪ ಅಂಡ್ ಸನ್ಸ್‌ನ ಬಿ.ಎಸ್. ಮೈನಾಲ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಎಸ್ಪಿ ಸಿ.ಬಿ. ರಿಷ್ಯಂತ್, ಡಿವೈಎಸ್ಪಿ ನರಸಿಂಹ ತಾಮ್ರಧ್ವಜ, ಬಸವರಾಜ್, ಪ್ರಕಾಶ್, ಬಿಎಸ್‌ಸಿ ಮಾರ್ಕೆಟಿಂಗ್ ವಿಭಾಗದ ಉಮೇಶ್ ಹಾಗು ಇತರರು ಉಪಸ್ಥಿತರಿದ್ದರು.

# ಇಂದಿನಿಂದ ವಾರಾಂತ್ಯದ ಕರ್ಫ್ಯೂ

**(1ನೇ ಪುಟದಿಂದ)** ಸಾಗಾಣಿಕೆ ಮತ್ತು ಆರೋಗ್ಯ ಸೇವಾ ವಾಹನಗಳಿಗೆ ಯಾವುದೇ ನಿರ್ಬಂಧ ಇರುವುದಿಲ್ಲ.

ವೈದ್ಯಕೀಯ ಸೇವೆ, ದಿನಸಿ ಅಂಗಡಿ, ಹಣ್ಣು, ತರಕಾರಿ, ಹಾಲು ಮಾರಾಟ ಎಂದಿನಂತೆ ಇರಲಿದೆ. ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ಗಳು ಸಂಚರಿಸಲಿವೆ. ಆದರೆ ನಗರ ಪ್ರದೇಶಗಳಲ್ಲಿ ಅಗತ್ಯ ಮತ್ತು ತುರ್ತು ಸೇವೆಗಾಗಿ ಬಸ್‌ಗಳು ರಸ್ತೆಗಿಳಿಯಲಿವೆ.

ಉಳಿದಂತೆ ಆಟೋ, ಟ್ಯಾಕ್ಸಿ ಹಾಗೂ ಸಾರ್ವ ಜನಿಕ ವಾಹನಗಳು ರಸ್ತೆಗಿಳಿಯುವಂತಿಲ್ಲ. ಹೋಟೆ ಲ್‌ಗಳಲ್ಲಿ ಪಾರ್ಸೆಲ್‌ಗಳಿಗೆ ಮಾತ್ರ ಅವಕಾಶವಿ ರುತ್ತದೆ. ಉಳಿದಂತೆ ಬಾರ್, ಪಬ್, ಕ್ಲಬ್, ಸಿನಿಮಾ ಮಂದಿರ ಪೂರ್ಣವಾಗಿ ಬಂದ್ ಆಗಿರುತ್ತವೆ. ಎರಡು ದಿನಗಳ ಕಾಲ ಪಾರ್ಕ್‌ಗಳು ತೆರೆಯುವಂತಿಲ್ಲ. ಕರ್ಫ್ಯೂವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯ ಸರ್ಕಾರ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದೆ.

ಮುಖ್ಯರಸ್ತೆಗಳು, ಟೋಲ್‌ಗಳು ಮತ್ತು ಮೇಲ್ಸೇತುವೆಗಳನ್ನು ಮುಚ್ಚುವಂತೆ ಆದೇಶ ಮಾಡಲಾಗಿದೆ. ಪ್ರಮುಖವಾಗಿ ಗಡಿ ಭಾಗ ಹಾಗೂ ನಗರ, ಪಟ್ಟಣ ಪ್ರವೇಶಿಸುವ ಪ್ರಮುಖ ರಸ್ತೆಗಳಲ್ಲಿ ಅಗತ್ಯ ಸೇವೆ ವಾಹನಗಳಿಗೆ ಅವಕಾಶ ನೀಡಿ, ಉಳಿದ ಸಾರ್ವಜನಿಕ ವಾಹ ನಗಳ ತಡೆಗೆ ಅನುಮತಿ ನೀಡದಿರಲು ಸೂಚಿಸಲಾಗಿದೆ.

ತುರ್ತು ಇಲ್ಲವೇ ಅಗತ್ಯ ಸೇವೆಗೆ ಪ್ರಯಾಣ ಮಾಡಲು ದಾಖಲಾತಿ ನೀಡಿ, ಸಂಚರಿಸಲು ಅನುವು ಮಾಡಿಕೊಡ ಲಾಗಿದೆ. ಒಂದು ವೇಳೆ ಅನಗತ್ಯ ಕಾರಣ ನೀಡಿ ಓಡಾಡಲು ಮುಂದಾದರೆ ಅಂತಹ ವಾಹನಗಳು ಜಪ್ತಿಯಾಗಲಿವೆ.

ಸರ್ಕಾರಿ ಸ್ವಾಮ್ಯದ ಕಚೇರಿ, ಐಟಿ-ಬಿಟಿ ಮತ್ತು ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ತಮ್ಮ ಸಂಸ್ಥೆಯ ಗುರುತಿನ ಚೀಟಿ ತೋರಿಸಿ, ಓಡಾಡಬಹುದಾಗಿದೆ.

## ಬದಲಾವಣೆ ಇಲ್ಲ

**(1ನೇ ಪುಟದಿಂದ)** 15 ರಂದು ಮತ್ತೆ ತಜ್ಞರೊಟ್ಟಿಗೆ ಸಮಾಲೋಚನೆ ನಡೆಸಿ. ಸರ್ಕಾರ ಮುಂದಿನ ತೀರ್ಮಾನ ಕೈಗೊಳ್ಳುತ್ತದೆ. ಅಲ್ಲಿಯ ವರೆಗೂ ಹಾಲಿ ನಿಯಮಾವಳಿಗಳೇ ಮುಂದುವರೆ ಯುತ್ತವೆ ಎಂದರು.

ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಜೀವ ಮತ್ತು ಜೀವನ ಮುಖ್ಯ. ಇದನ್ನು ಗಮನದಲ್ಲಿಟ್ಟುಕೊಂಡು ಕಠಿಣ ನಿಯಮಾವಳಿಗಳನ್ನು ತಂದಿದ್ದೇವೆ ಎಂದಿದ್ದಾರೆ.

ಬೆಂಗಳೂರು ಹೊರತುಪಡಿಸಿ, ಉಳಿದೆಡೆ ಕರ್ಫ್ಯೂ ರದ್ದು ಮಾಡಿದರೆ, ಇಲ್ಲಿನ ಜನರು ಇತರೆ ನಗರ ಇಲ್ಲವೇ ಗ್ರಾಮೀಣ ಭಾಗಕ್ಕೆ ಹಾರಿ ರೋಗ ತರುತ್ತಾರೆ ಎಂದವರು ಕಳವಳ ವ್ಯಕ್ತಪಡಿಸಿದ್ದಾರೆ.

## ನಗರದಲ್ಲಿ ಇಂದು 'ಚಂದ್ರಬಿಂಬ' ಕೃತಿ ಲೋಕಾರ್ಪಣೆ

ಹೆಸ್ಕುಂದ ಚಂದ್ರಶೇಖರ ಅಡಿಗರ ಸಂಸ್ಮರಣೆ ಗ್ರಂಥ ಸಮಿತಿ ವತಿಯಿಂದ ಕೀರ್ತಿಶೇಷ ಹೆಸ್ಕುಂದ ಚಂದ್ರಶೇಖರ ಅಡಿಗರ 'ಚಂದ್ರಬಿಂಬ' ಕೃತಿಯ ಲೋಕಾರ್ಪಣೆ ಸಮಾರಂಭವು ಕುವೆಂಪು ಕನ್ನಡ ಭವನದಲ್ಲಿ ಇಂದು ಸಂಜೆ 4.30 ಕ್ಕೆ ನಡೆಯಲಿದೆ. ಸಾಹಿತಿ ಮತ್ತು ಸಂಶೋಧಕ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ಕೃತಿ ಲೋಕಾರ್ಪಣೆ ಮಾಡಲಿದ್ದು, ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಡಾ. ಎಂ.ಜಿ. ಈಶ್ವರಪ್ಪ, ವಿದುಷಿ ಆಶಾ ಶ್ರೀನಿವಾಸ್ ಆಚಾರ್ಯ, ಶ್ರೀಮತಿ ಚಂದ್ರಶೇಖರ ಅಡಿಗ ಭಾಗವಹಿಸಲಿದ್ದಾರೆ. ಪುಟಾಣಿಗಳಾದ ಅದಿತಿ ಆಚಾರ್ಯ, ಅಭಿರಾಮ ಆಚಾರ್ಯ ಅವರಿಂದ ಭರತನಾಟ್ಯ ಪ್ರದರ್ಶನವಿರುತ್ತದೆ. ಇದೇ ಸಂದರ್ಭದಲ್ಲಿ ಕು. ಅದಿತಿ ಆಚಾರ್ಯ ಅವರಿಗೆ ಕಲಾಕುಂಚ ಸಂಸ್ಥೆಯಿಂದ 'ನಾಟ್ಯಸಿರಿ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

## ಗುತ್ತೂರು ವಿದ್ಯುತ್ ವಿತರಣಾ ಕೇಂದ್ರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಚಿಂತಾಮಣಿ ನಗರ, ಹಳೆಹರ್ಲಾಪುರ, ವಾಟರ್ ವರ್ಕ್ಸ್, ಅಮರಾವತಿ ಕಾಲೋನಿ, ಮಜ್ಜಿಗೆ ಲೇಔಟ್, ಆಶ್ರಯ ಕಾಲೋನಿ, ವಿಜಯನಗರ, ಕೆ.ಆರ್. ನಗರ, ಹೊಸ ಹರ್ಲಾಪುರ, ಬಸ್‌ಡಿಪೋ ರಸ್ತೆ, ಕಿರ್ಲೋಸ್ಕರ್ ಕಾಲೋನಿ, ಹಳೆ ಪಿ.ಬಿ. ರಸ್ತೆ, ಭರಂಪುರ, ಕೆಐಎಡಿಬಿ, ಇಂಡಸ್ಟ್ರೀಯಲ್ ಏರಿಯಾ, ಕೆಹೆಚ್‌ಬಿ ಕಾಲೋನಿ, ಅಮರಾವತಿ ಗ್ರಾಮ, ಆಂಜನೇಯ ಬಡಾವಣೆ, ಪೊಲೀಸ್ ಕ್ವಾರ್ಟರ್ಸ್, ಕೇಶವನಗರ, ರೈಲ್ವೆ ಸ್ಟೇಷನ್, ಬಸ್‌ಸ್ಟ್ಯಾಂಡ್, ಪಿ.ಬಿ. ರಸ್ತೆ, ಟಿಪ್ಪು ನಗರ, ಪಟೇಲ್ ಬಡಾವಣೆ, ಗ್ರಾಮೀಣ ಪ್ರದೇಶಗಳಾದ ದೊಗ್ಗಳ್ಳಿ, ಗಂಗನರಸಿ, ಗಂಗನರಸಿ ಕ್ಯಾಂಪ್, ಗುತ್ತೂರು ಐ.ಪಿ. ವಲಯ, ದೀಟೂರು, ಪಾಮೇನಹಳ್ಳಿ, ಕರಲಹಳ್ಳಿ ಮಠ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 11 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಬಿಐಇಟಿ ಕಾಲೇಜಿನಲ್ಲಿಂದು ಕಾರ್ಯಾಗಾರ

ಬಿಐಇಟಿಯ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗವು ಎ.ಐ.ಸಿ. ಟಿ.ಇ - ಐ.ಎಸ್.ಟಿ.ಇ. ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ಇಂದಿನಿಂದ 13ರವರೆಗೆ 'ಎಲೆಕ್ಟ್ರಾನಿಕ್ ಅಸಿಸ್ಟಿವ್ ಡಿವೈಸಸ್' ವಿಷಯದ ಬಗ್ಗೆ ಕಾರ್ಯಾಗಾರವನ್ನು ಆನ್ ಲೈನ್ ಮೂಲಕ ಆಯೋಜಿಸಲಾಗಿದೆ.

ಕಾರ್ಯಕ್ರಮವನ್ನು ಸಿಐಟಿ ಪ್ರಾಂಶುಪಾಲ ಡಾ. ಸುರೇಶ್ ಡಿ. ಎಸ್. ಉದ್ಘಾಟಿಸುವರು, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ವಿಭಾಗದ ಮುಖ್ಯಸ್ಥjeo ಡಾ. ಜಿ. ಎಸ್. ಸುನೀತ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಸಿ.ಆರ್.ಸಿ. ಡಾ. ಜ್ಞಾನವೇಲ್, ಪ್ರಾಂಶುಪಾಲ ಡಾ. ಹೆಚ್. ಬಿ. ಅರವಿಂದ, ನಿರ್ದೇಶಕ ಪ್ರೊ. ವೈ. ವೃಷಭೇಂದ್ರಪ್ಪ, ಕಾರ್ಯಾಗಾರದ ಸಂಯೋಜಕ ಡಾ. ಬಿ. ಎಂ. ಜಯದೇವಪ್ಪ ಭಾಗವಹಿಸಲಿದ್ದಾರೆ.

## ಆಕರ್ಷಕ ಗೃಹಿಣಿ ಫೋಟೋ ಸ್ಪರ್ಧೆ

ದಾವಣಗೆರೆ, ಡಿ.6-ನಗರದ ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಮಹಿಳಾ ವಿಭಾಗದಿಂದ ಉಚಿತ ರಾಜ್ಯ ಮಟ್ಟದ 'ಆಕರ್ಷಕ ಗೃಹಿಣಿ ಫೋಟೋ ಸ್ಪರ್ಧೆ' ನಡೆಯಲಿದೆ. 20ರಿಂದ 40 ವರ್ಷ ವಯಸ್ಸಿನ ವಿವಾಹಿತ ಮಹಿಳೆಯರು ನಮ್ಮ ಸಾಂಪ್ರದಾಯಿಕ ಉಡುಗೆ ತೊಡುಗೆಯೊಂದಿಗೆ ತಮ್ಮ ಮೊಬೈಲ್‌ನಲ್ಲಿ ಮನೆಯಲ್ಲೇ ಪೂರ್ಣ ಪ್ರಮಾಣದ ಒಂದು ಫೋಟೋ ತೆಗೆದು ಇದೇ ದಿನಾಂಕ 10 ರೊಳಗೆ 9513189196 ಈ ವ್ಯಾಟ್ಸಾಪ್ ಸಂಖ್ಯೆಗೆ ಕಳಿಸಬಹುದಾಗಿದೆ ಎಂದು ಅಧ್ಯಕ್ಷರಾದ ಹೇಮಾ ಶಾಂತಪ್ಪ ಪೂಜಾರಿ ತಿಳಿಸಿದ್ದಾರೆ.


**ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು**

**Most Populr Astrologer**



ಉಚಿತ ಭವಿಷ್ಯ ಖಚಿತ ಪರಿಹಾರ, ಫೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.

ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ಧ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ

ಮೊಬೈಲ್ : **89716 99826**


## ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯಲ್ಲಿ ಕೋವಿಡ್ ಲಸಿಕೆ



ದಾವಣಗೆರೆ, ಜ.6- ನಗರದ ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ ಆಶ್ರಯದಲ್ಲಿ ನಡೆಯುತ್ತಿರುವ ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆ ಹಾಗೂ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಕೋವಿಡ್ ಲಸಿಕೆ ನೀಡಲಾಯಿತು.

ಉತ್ತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಟಿ. ಅಂಬಣ್ಣ ಅವರು ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಮನೋಹರ್ ವಿ. ಚಿಗಟೇರಿ, ಗುರುಬಸಮ್ಮ ವಿ. ಚಿಗಟೇರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಹೆಚ್. ನಿಂಗಪ್ಪ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಹಿರಿಯ ಶಿಕ್ಷಕ ಸುರೇಶ್ ನಾಯ್ಕ್ ಮತ್ತು ಇತರರು ಹಾಜರಿದ್ದು ಲಸಿಕಾ ಕಾರ್ಯಕ್ರಮಕ್ಕೆ ಸಹಕರಿಸಿದರು.

ಲಸಿಕಾ ಕಾರ್ಯಕ್ರಮದಲ್ಲಿ ಗುರುಬಸಮ್ಮ ಶಾಲೆಯ 119 ವಿದ್ಯಾರ್ಥಿ ಗಳಿಗೆ, ಅಕ್ಕಮಹಾದೇವಿ ಶಾಲೆಯ 88 ವಿದ್ಯಾರ್ಥಿನಿಯರಿಗೆ ಲಸಿಕೆ ನೀಡಿ ಕಾರ್ಯಕ್ರಮ ಯಶಸ್ವಿಗೊಳಿಸಿದ ಆರೋಗ್ಯ ಇಲಾಖೆ ಸಿಬ್ಬಂದಿಗೆ, ನೋಡಲ್ ಅಧಿಕಾರಿಗಳಿಗೆ ಸಂಸ್ಥೆಯ ವತಿಯಿಂದ ಕೃತಜ್ಞತೆ ಸಲ್ಲಿಸಲಾಯಿತು.

## ವಿದ್ಯಾಸಿರಿ ಯೋಜನೆ : ಅರ್ಜಿ ಆಹ್ವಾನ

ದಾವಣಗೆರೆ, ಜ. 5- ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಯೋಜನೆಯಡಿ ಅರ್ಜಿ ಸ್ವೀಕರಿಸುವ ದಿನಾಂಕವನ್ನು ಇದೇ 10 ರವರೆಗೆ ವಿಸ್ತರಿಸಲಾಗಿದೆ. ಅಲ್ಪಸಂಖ್ಯಾತರ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ, ಪಾರ್ಸಿ ವಿದ್ಯಾರ್ಥಿಗಳು ಅರ್ಜಿಯನ್ನು sevasindhu.karnataka.nic.in ವೆಬ್‌ಸೈಟ್‌ನಲ್ಲಿ ಸಲ್ಲಿಸಬಹುದಾಗಿದೆ.

ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಛೇರಿ ದೂರವಾಣಿ ಸಂಖ್ಯೆ 08192-250022 ಅಥವಾ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, # 44, 'ಎ' ಬ್ಲಾಕ್, 2ನೇ ಮಹಡಿ, ಜಿಲ್ಲಾಡಳಿತ ಭವನ, ಕರೂರು ಕ್ರಾಸ್, ಹರಿಹರ ರಸ್ತೆ, ದಾವಣಗೆರೆ ಇಲ್ಲಿ ಸಂಪರ್ಕಿಸಬಹುದು.

## ವಾರಾಂತ್ಯದ ಪ್ರಯಾಣಕ್ಕೆ ಪ್ರಯಾಸ

**(1ನೇ ಪುಟದಿಂದ)** ಎದುರಾಗಲಿವೆ.

ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿರುವ ಕೆ.ಎಸ್.ಆರ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿ ಸಿದ್ದೇಶ್ವರ ಹೆಬ್ಬಾಳ್, ವಾರಾಂತ್ಯದ ಕರ್ಫ್ಯೂ ವೇಳೆ ಬಸ್‌ಗಳ ಸಂಚಾರ ಇರಲಿದೆ. ಆದರೆ, ಬೇಡಿಕೆಗೆ ಅನುಗುಣವಾಗಿ ಬಸ್‌ಗಳನ್ನು ಬಿಡಲಾಗುವುದು. ನಗರ ಸ್ಥಳೀಯ ಬಸ್‌ಗಳೂ ಸಹ ಬೇಡಿಕೆಗೆ ಅನುಗುಣವಾಗಿ ಸಂಚರಿಸಲಿವೆ ಎಂದಿದ್ದಾರೆ.

ಕಳೆದ ಮೂರ್ನಾಲ್ಕು ದಿನಗಳಿಂದ ರಾತ್ರಿ ವೇಳೆ ಸಂಚರಿಸುವ ಬಸ್‌ಗಳ ಬೇಡಿಕೆ ಕಡಿಮೆಯಾಗಿದೆ. ಆರೇಳು ಬಸ್‌ಗಳನ್ನು ಈಗಾಗಲೇ ನಿಲ್ಲಿಸಲಾಗಿದೆ. ಕರ್ಫ್ಯೂ ಅವಧಿಯಲ್ಲಿ ಬೇಡಿಕೆ ನೋಡಿಕೊಂಡು ಕಾರ್ಯ ನಿರ್ವಹಿಸಲಾಗುವುದು ಎಂದು ತಿಳಿಸಿದ್ದಾರೆ.

ಖಾಸಗಿ ಬಸ್ ಮಾಲೀಕರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಆರ್. ಸತೀಶ್ ಅವರು ಪತ್ರಿಕೆಯೊಂದಿಗೆ ಮಾತನಾಡಿದ್ದು, ವಾರಾಂತ್ಯದ ಕರ್ಫ್ಯೂ ವೇಳೆ ಬಸ್‌ಗಳನ್ನು ಓಡಿಸುವ ಬಗ್ಗೆ ಬಸ್ ಮಾಲೀಕರು ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ಆದರೆ, ಪ್ರಯಾಣಿಕರ ಸಂಖ್ಯೆ ಕಡಿಮೆ ಆಗುವ ಕಾರಣ ಖಾಸಗಿ ಬಸ್‌ಗಳ ಸಂಚಾರ ಅನುಮಾನ ಎಂದಿದ್ದಾರೆ. ಡೀಸೆಲ್ ಹೊರೆ ಹೆಚ್ಚಾಗಿದೆ. ಒಂದು ಟ್ರಿಪ್ ಬಸ್ ಓಡಿಸಿದರೂ ನಿರ್ವಹಣಾ ವೆಚ್ಚ ಹೆಚ್ಚಾಗುತ್ತದೆ. ಕರ್ಫ್ಯೂ ಕಾರಣದಿಂದ ಜನರೇ ಇರುವುದಿಲ್ಲ ಎಂದ ಮೇಲೆ ಬಸ್ ಓಡಿಸುವುದು ವ್ಯರ್ಥ ಹೊರೆಯಾಗುತ್ತದೆ ಎಂದವರು ಹೇಳಿದ್ದಾರೆ. ಸರ್ಕಾರ ಬಸ್‌ಗಳ ಮೇಲೆ ನಿರ್ಬಂಧ ಹೇರಿಲ್ಲವಾದರೂ, ಸಂಚಾರಕ್ಕೆ ಸಮಸ್ಯೆಯಾಗುವ ಸಾಧ್ಯತೆಗಳು ಸ್ಪಷ್ಟವಾಗಿವೆ. ಹೀಗಾಗಿ ವಾರಾಂತ್ಯದಲ್ಲಿ ಜನರು ಪ್ರಯಾಣ ಮಾಡಲು ಎಚ್ಚರಿಕೆ ವಹಿಸಬೇಕಾದ ಅಗತ್ಯವಿದೆ.

## ಎಆರ್‌ಜಿ ಪಿಯು ಕಾಲೇಜಿನಲ್ಲಿ ಲಸಿಕೆ



ದಾವಣಗೆರೆ, ಜ.6- ನಗರದ ಎಆರ್‌ಜಿ ಪದವಿ ಪೂರ್ವ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಯ ವಿದ್ಯಾರ್ಥಿಗಳಿಗೆ ಕೋವ್ಯಾಕ್ಸಿನ್ ಲಸಿಕೆ ಹಾಕುವ ಕಾರ್ಯಕ್ರಮ ಇಂದು ನಡೆಯಿತು. ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಆಗಮಿಸಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಸ್.ಎಸ್. ಲೇಔಟ್ ಎ ಬ್ಲಾಕ್, ಎಸಿಬಿ ಕಛೇರಿ ರಸ್ತೆ, ಅಂಗವಿಕಲ ಸ್ಕೂಲ್, ಎಸ್.ಎನ್. ಲೇಔಟ್, ಲಕ್ಷ್ಮಿ ಫ್ಲೋರ್‌ಮಿಲ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ ವಿದ್ಯುತ್ ಇರುವುದಿಲ್ಲ.


**ಎಂ.ಹೆಚ್. ಅಸೋಸಿಯೇಟ್ಸ್**

ವಾಸವಿ ಫುಡ್ ಕಾರ್ನರ್, ಜಯದೇವ ಸರ್ಕಲ್ ಹತ್ತಿರ, ನಿಟುವಳ್ಳಿ ರಸ್ತೆ, ದಾವಣಗೆರೆ.



**ಪ್ರಕಟಣೆ**

ಹನುಮಂತ ಇ.ಪಿ. ಬಿನ್ ಪರಸಪ್ಪ ಇವರು ಮಾಗಾನಹಳ್ಳಿ ಗ್ರಾಮ, ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆ ಇವರು ಎಂ.ಹೆಚ್. ಅಸೋಸಿಯೇಟ್ಸ್ ಸಂಸ್ಥೆಗೆ ಸಂಬಂಧಿಸಿದಂತೆ ಬಜಾಜ್ ಕಂಪನಿಯಲ್ಲಿ ಒಂದೂವರೆ ವರ್ಷದಿಂದ ಫೀಲ್ಡ್ ಕೆಲಸವನ್ನು ನಿರ್ವಹಿಸುತ್ತಿದ್ದರು. 1.11.2021ರಲ್ಲಿ ಕೆಲಸವನ್ನು ಬಿಟ್ಟಿರುತ್ತಾರೆ. ಇವರ ಹತ್ತಿರ ಯಾವುದೇ ರೀತಿಯ ಹಣಕಾಸಿನ ವ್ಯವಹಾರಗಳನ್ನು (ಸಾಲ) ಇಟ್ಟುಕೊಳ್ಳಬಾರದು. ಈ ವ್ಯಕ್ತಿಯಿಂದ ಗ್ರಾಹಕರಿಗೆ ಏನಾದರೂ ತೊಂದರೆಗಳು ಉಂಟಾದರೆ ಕಂಪನಿ ಜವಾಬ್ದಾರರಲ್ಲ.

**ಹೆಸರು : ಹನುಮಂತ, ಫೋ: 98448 6422, 80731 93793**

ಸ್ಥಳ : ದಾವಣಗೆರೆ
ದಿನಾಂಕ : 06.01.2022

ಇಂತಿ ತಮ್ಮ ವಿಶ್ವಾಸಿ
**ಎಂ.ಹೆಚ್. ಅಸೋಸಿಯೇಟ್ಸ್**



ಕರ್ನಾಟಕ ಸರ್ಕಾರ

**ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ದಾವಣಗೆರೆ.**

ಜಿಲ್ಲಾಡಳಿತ ಭವನ, 1 ನೇ ಮಹಡಿ, ಕೊಠಡಿ ಸಂ: 36, ದಾವಣಗೆರೆ.

ದೂ: 08192-236488 ಫ್ಯಾಕ್ಸ್ 08192-255775

ಕ್ರ.ಸಂ.ಜಿಸಂಸಂ/ದಾವ/ಆಡಳಿತ/ವಾಹನ/2021-22/ ದಿ: 04.01.2022

**ಪ್ರಕಟಣೆ**

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ ಇವರಿಗೆ ಚಾಲ್ತಿಯಲ್ಲಿರುವ ಸರ್ಕಾರಿ ಆದೇಶದ ಪ್ರಕಾರ ನಿಗದಿತ ಷರತ್ತು ಮತ್ತು ನಿಬಂಧನೆಗಳಿಗೆ ಅನ್ವಯಗೊಳಪಡಿಸಿ ಮಾಸಿಕ ಬಾಡಿಗೆ ಆಧಾರದ ಮೇಲೆ ಹಳದಿ ಬೋರ್ಡ್ ಪರವಾನಗೆ ಹೊಂದಿರುವ ಮತ್ತು ಅಗತ್ಯವಿರುವ ಎಲ್ಲ ಸೂಕ್ತ ದಾಖಲಾತಿಗಳನ್ನು ಹೊಂದಿರುವ ಹವಾ ನಿಯಂತ್ರಿಕ (ಎಸಿ) 1 [ಒಂದು] ವಾಹನ ಸೇವೆಯನ್ನು ಒಂದು ವರ್ಷದ ಅವಧಿಗೆ ಒದಗಿಸಲು ವಾಹನದ ದರ ಪಟ್ಟಿಯನ್ನು ಕರೆಯಲಾಗಿದೆ. ಆಸಕ್ತಿಯುಳ್ಳ ಪ್ರವಾಸಿ ಏಜೆಂಟರು/ ವಾಹನ ಮಾಲೀಕರು ಈ ಕಚೇರಿಯಿಂದ ಟೆಂಡರ್ ಫಾರಂಗಳನ್ನು ದಿನಾಂಕ: 04.01.2022 ರಿಂದ 12.01.2022ರ ಅಪರಾಹ್ನ 2.00 ಗಂಟೆಯೊಳಗೆ ಪಡೆದು, ದಿನಾಂಕ: 12.01.2022 ರಂದು ಅಪರಾಹ್ನ 4 ಗಂಟೆಯೊಳಗಾಗಿ ಭರ್ತಿ ಮಾಡಿದ ಟೆಂಡರ್ ಫಾರಂ ಮತ್ತು ವಾಹನದ ಸೂಕ್ತ ದಾಖಲಾತಿಗಳಿರುವ ಮೊಹರು ಮಾಡಿದ ಲಕೋಟೆಗಳನ್ನು ಈ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ಮೇಲ್ಕಂಡ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ವಾಸಾಇ/ಡಿವಿಜಿ/610/ ಎಂಸಿಎ/2021-22

ಸಹಿ/- ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ದಾವಣಗೆರೆ.



**ಸಾರ್ವಜನಿಕ ಪ್ರಕಟಣೆಗಾಗಿ**

ಈ ಕೆಳಕಂಡ ಪ್ರಕಟಣೆದಾರನಾದ ನಾನು ಈ ಮುಖೇನ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ: ನಾನು ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ಶ್ರೀ ಬಿ.ಸಿ. **ಷಣ್ಮುಖಪ್ಪ ಯಾನೆ ದಾನಪ್ಪ ಸಿ.ಎಸ್. ಬಿನ್ ಲೇಟ್ ಬಿ.ಎಸ್. ಚನ್ನಬಸಪ್ಪ,** 64 ವರ್ಷ, ಹಾಲಿ ವಾಸ ದಾವಣಗೆರೆ ಸಿಟಿ, ಎಂಸಿಸಿ 'ಎ' ಬ್ಲಾಕ್, 4ನೇ ಮುಖ್ಯ ರಸ್ತೆ, ಮನೆ ನಂ. 2160 ರಲ್ಲಿಯ ವಾಸಿಯಾದ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿಯವರು ದಿ. 2.9.1998 ರಂದು ಯರಗುಂಟೆ ಗ್ರಾಮದ ವಾಸಿಗಳಾದ ಹನುಮಂತಪ್ಪ ಬಿನ್ ಕನ್ನಪ್ಪ ಹಳ್ಳಳ್ಳಿ ಮತ್ತು ಸದರಿಯವರ ಮಗನಾದ ಅಂಜಿನಪ್ಪ ಇವರುಗಳಿಂದ ಕ್ರಯಕ್ಕೆ ಪಡೆದಿದ್ದು, ಸದರಿ ನೋಂದಣಿ ಕ್ರಯ ಪತ್ರ ಸಂಖ್ಯೆ 2225. ಸದರಿ ಸೊತ್ತಿನಲ್ಲಿನ **ದಕ್ಷಿಣ ಭಾಗದ ಕಡೆ** ಬರುವ ಈ ಕೆಳಕಂಡ ಷೆಡ್ಯೂಲ್ ಸೊತ್ತನ್ನು ಪ್ರಕಟಣೆದಾರರಾದ ನಾನು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಸದರಿ ಸಂಬಂಧವಾಗಿ ಈ ಕೆಳಗೆ ಸಹಿ ಮಾಡಲಾದ / ಪ್ರಕಟಣೆದಾರರಾದ ನಾನು ಈ ಮೂಲಕ ಸಾರ್ವಜನಿಕರಿಗೆ ಹಾಗೂ ಹಣಕಾಸು ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ,

ಸದರಿ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾರದಾದರು ಹಕ್ಕು-ಬಾಧ್ಯತೆ, ತಂಟೆ-ತಕರಾರು ಇದ್ದಲ್ಲಿ ಅಥವಾ ಷೆಡ್ಯೂಲ್ ಸೊತ್ತಿಗೆ ಸಂಬಂಧಿಸಿದಂತೆ ಯಾವುದೇ ಹಣಕಾಸಿನ ಸಂಸ್ಥೆಯು ಈಗಾಗಲೇ ವ್ಯವಹರಿಸಿದ್ದಲ್ಲಿ/ ವ್ಯವಹರಿಸುವ ಹಂತದಲ್ಲಿದ್ದಲ್ಲಿ ಈ ಕೂಡಲೇ ಪ್ರಕಟಣೆದಾರರನ್ನು ಸಂಪರ್ಕಿಸತಕ್ಕದ್ದು. ಒಂದು ವೇಳೆ ಈ ಪ್ರಕಟಣೆಯಾದ 7 (ಏಳು) ದಿನಗಳ ಒಳಗಾಗಿ ಯಾವುದೇ ತಕರಾರು ಅರ್ಜಿ ಬಾರದೇ ಹೋದಲ್ಲಿ ಮುಂದೆ ಆಗುವ ತೊಂದರೆಗಳಿಗೆ ತಾವೇ ಕಾನೂನು ರೀತ್ಯಾ ಜವಾಬ್ದಾರರು ಆಗಿರುತ್ತೀರಿ ಮತ್ತು ತಾವೇ ಖುದ್ದು ಜವಾಬ್ದಾರರು ಎಂದು ತಿಳಿಯುವುದು.

**ಷೆಡ್ಯೂಲ್**

ದಾವಣಗೆರೆ ಸಬ್ ರಿಜಿಸ್ಟ್ರಾರ್‌ರವರ ಆಫೀಸ್ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ತಾಲ್ಲೂಕು, ಕಸಬಾ ಹೋಬಳಿ, ಯರಗುಂಟೆ ಗ್ರಾಮದ ರಿ.ಸರ್ವೆ. ನಂ.36/2, ವಿಸ್ತೀರ್ಣ ಎಕರೆ-0, ಗುಂಟೆ - 20 ವುಳ್ಳ ಜಮೀನಿಗೆ ಚಕ್ಕುಬಂದಿ:
ಪೂರ್ವಕ್ಕೆ : ಕೊಂಡಜ್ಜಿ ಶಿವಣ್ಣನವರ ಜಮೀನು, ಪಶ್ಚಿಮಕ್ಕೆ: ಕೊಂಡಜ್ಜಿ ರಸ್ತೆ
ಉತ್ತರಕ್ಕೆ : ಇದೇ ಸರ್ವೆ ನಂಬರ್ ಪೈಕಿ ಉಳಿದ ನನ್ನ ಬಾಬ್ತು ಸೊತ್ತು
ದಕ್ಷಿಣಕ್ಕೆ : ಅಂಜಿನಪ್ಪ ಇವರ ಸೊತ್ತು.

ಪ್ರಕಟಣೆದಾರ

**ಶ್ರೀ ಎಸ್.ಎನ್. ಚಂದ್ರಪ್ಪ ಬಿನ್ ಲೇಟ್ ನಾಗಪ್ಪ**

ವಾಸ: 2ನೇ ಮೇನ್, 5ನೇ ಕ್ರಾಸ್, ಜಾಲಿನಗರ (ಸುರೇಶ್ ನಗರ), ದಾವಣಗೆರೆ.

**ಮೊ ನಂ. 94489 24110, 97416 75562**

# ದೇಶಾದ್ಯಂತ ಕೊರೊನಾ ತೀವ್ರ ಏರಿಕೆ

**ಟೆಸ್ಟ್ ಹೆಚ್ಚಿಸಲು ಕೇಂದ್ರ ಸರ್ಕಾರದ ಸೂಚನೆ**

ನವದೆಹಲಿ, ಜ. 6 – ಗುರುವಾರ ದೇಶಾದ್ಯಂತ 90 ಸಾವಿರಕ್ಕೂ ಹೆಚ್ಚು ಕೊರೊನಾ ಸೋಂಕಿತರು ಪತ್ತೆಯಾಗಿದ್ದು, ಸಕ್ರಿಯ ಸೋಂಕಿತರ ಸಂಖ್ಯೆ 2.85 ಲಕ್ಷದ ಹಂತಕ್ಕೆ ತಲುಪಿದೆ. ಈ ಸೋಂಕಿತರಲ್ಲಿ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ದೆಹಲಿ, ತಮಿಳುನಾಡು ಹಾಗೂ ಕೇರಳಗಳ ಪಾಲು ಶೇ.66.97ರಷ್ಟಾಗಿದೆ.

ಈ ನಡುವೆ, ಒಂಭತ್ತು ರಾಜ್ಯಗಳಲ್ಲಿ ಟೆಸ್ಟಿಂಗ್ ಕಡಿಮೆಯಾಗುತ್ತಿರುವ ಬಗ್ಗೆ ಕೇಂದ್ರ ಸರ್ಕಾರ ಗಮನ ಸೆಳೆದಿದೆ. ತಮಿಳುನಾಡು, ಪಂಜಾಬ್, ಒಡಿಶಾ, ಉತ್ತರ ಪ್ರದೇಶ, ಉತ್ತರಾಖಂಡ, ಮಿಜೋರಾಂ, ಮೇಘಾಲಯ, ಜಮ್ಮು - ಕಾಶ್ಮೀರ ಹಾಗೂ ಬಿಹಾರಗಳು ಟೆಸ್ಟ್ ಹೆಚ್ಚಿಸಲು ತಿಳಿಸಲಾಗಿದೆ.

ಜಿಲ್ಲಾ ಹಾಗೂ ತಾಲ್ಲೂಕು ಹಂತಗಳಲ್ಲಿ ಕೊರೊನಾ ನಿಯಂತ್ರಣ ಕೇಂದ್ರಗಳನ್ನು ತೆರೆಯಬೇಕು. ಈ ಕೇಂದ್ರಗಳ ಮೂಲಕ ಮನೆಯಲ್ಲಿ ಪ್ರತ್ಯೇಕವಾಗಿರುವ ರೋಗಿಗಳ ಮಾಹಿತಿ ಪಡೆಯಬೇಕು ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಆರತಿ ಅಹುಜ ತಿಳಿಸಿದ್ದಾರೆ.

ಈ ನಡುವೆ, ಒಡಿಶಾದಲ್ಲಿ ಓಮಿಕ್ರಾನ್ ಕಾರಣದಿಂದ ಎರಡನೇ ಸಾವು ಸಂಭವಿಸಿರುವುದು ವರದಿಯಾಗಿದೆ. 55 ವರ್ಷದ ಮಹಿಳೆ ಕಳೆದ ಡಿಸೆಂಬರ್ 27ರಂದು ಸಂಬಲ್ಪುರ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದರು. ಅವರಿಗೆ ಓಮಿಕ್ರಾನ್ ಸೋಂಕಿದ್ದದ್ದು ಈಗ ಖಚಿತವಾಗಿದೆ.

ಓಮಿಕ್ರಾನ್ ಕಾರಣದಿಂದ ಆಸ್ಪತ್ರೆಗೆ ದಾಖಲಾಗುವ ಪ್ರಮಾಣ ಕಡಿಮೆ ಇರಬಹುದು. ಆದರೆ, ಸೋಂಕನ್ನು ಸೌಮ್ಯ ಎಂದು ಭಾವಿಸುವುದು ಅಪಾಯಕಾರಿ. ಕಡಿಮೆ ತೀವ್ರತೆಯ ಸೋಂಕಿನ ಕಾರಣದಿಂದಲೂ ಆಸ್ಪತ್ರೆಗಳ ಮೇಲೆ ಒತ್ತಡ ಬೀಳಲಿದೆ ಎಂದು ವಿಶ್ವ ಆರೋಗ್ಯ ಸಂಘಟನೆಯ ಕೊರೊನಾ ಪರಿಣಿತರಾದ ಮಾರಿಯಾ ವ್ಯಾನ್ ಕೆರ್ಖೋವೆ ಹೇಳಿದ್ದಾರೆ.

ಮಹಾರಾಷ್ಟ್ರದಲ್ಲಿ ಕೊರೊನಾ ಸೋಂಕು ತೀವ್ರವಾಗಿ ಹೆಚ್ಚುತ್ತಿದ್ದು, ಗುರುವಾರ 36,265 ಸೋಂಕಿತರು ಕಂಡು ಬಂದಿದ್ದಾರೆ. ಮುಂಬೈ ಒಂದರಲ್ಲೇ 20,181 ಸೋಂಕಿತರು ಪತ್ತೆಯಾಗಿದ್ದಾರೆ.

ದೆಹಲಿಯಲ್ಲಿ 15,097 ಸೋಂಕಿತರು ಕಂಡು ಬಂದಿದ್ದಾರೆ. ಆದರೆ, ಲಾಕ್‌ಡೌನ್ ಮಾಡುವ ಪರಿಸ್ಥಿತಿ ಬಂದಿಲ್ಲ ಎಂದು ದೆಹಲಿ ಆರೋಗ್ಯ ಸಚಿವ ಸತ್ಯೇಂದ್ರ ಜೈನ್ ಹೇಳಿದ್ದಾರೆ.

# ದೇಶದ ಮೊದಲ ಶಿಕ್ಷಕಿ ಸಾವಿತ್ರಿ ಬಾಯಿ ಫುಲೆಯ ಆದರ್ಶ ಎಲ್ಲರಿಗೂ ಮಾದರಿ




ದಾವಣಗೆರೆ, ಜ.6- ಮಹಿಳೆಯರಿಗೆ ಶಿಕ್ಷಣ ಕೊಡಿಸುವ ಸದುದ್ದೇಶದಿಂದ ಶಾಲೆ ತೆರೆಯುವ ಮೂಲಕ ಅಕ್ಷರ ಕ್ರಾಂತಿಗೆ ನಾಂದಿ ಹಾಡಿದ ಮತ್ತು ದೇಶದ ಮೊದಲ ಶಿಕ್ಷಕಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುವ ಸಾವಿತ್ರಿ ಬಾಯಿ ಫುಲೆ ಅವರ ಆದರ್ಶ ಎಲ್ಲರಿಗೂ ಮಾದರಿಯಾಗಿದೆ ಎಂದು ಮಾನವ ಹಕ್ಕುಗಳ ವೇದಿಕೆ ಕಾರ್ಯದರ್ಶಿಗಳೂ, ಹಿರಿಯ ವಕೀಲರೂ ಆದ ಎಲ್.ಹೆಚ್. ಅರುಣ್ ಕುಮಾರ್ ಹೇಳಿದರು.

ನಗರದ ರೋಟರಿ ಬಾಲಭವನದಲ್ಲಿ ಸ್ಲಂ ಜನಾಂದೋಲನ-ಕರ್ನಾಟಕ ಹಾಗೂ ಸಾವಿತ್ರಿ ಬಾಯಿ ಫುಲೆ ಮಹಿಳಾ ಸಂಘಟನೆಯ ಜಿಲ್ಲಾ ಸಮಿತಿ ವತಿಯಿಂದ ಸ್ಲಂ ಜನಾಂದೋಲನ ಕರ್ನಾಟಕದ 12 ನೇ ಸಂಸ್ಥಾಪನಾ ದಿನದ ಅಂಗವಾಗಿ ಇಂದು ಹಮ್ಮಿಕೊಂಡಿದ್ದ ಸಾವಿತ್ರಿ ಬಾಯಿ ಫುಲೆಯವರ 191 ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಶಿಕ್ಷಕ ಸಮುದಾಯ ಮತ್ತು ಯುವಜನತೆ ಸಾವಿತ್ರಿ ಬಾಯಿ ಫುಲೆ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಅಗತ್ಯವಿದೆ. ನಿಸ್ವಾರ್ಥ ಸೇವೆ, ತ್ಯಾಗ ಮನೋಭಾವನೆ ಮತ್ತು ಸತತ ಪರಿಶ್ರಮದ ಮೂಲಕ ಶೋಷಿತ, ಬಡವರ್ಗದ ಮಹಿಳೆಯರು ಶಿಕ್ಷಣ ಪಡೆಯಲು ಸಾಧ್ಯವಾಯಿತು ಎಂದರು.

ಅನೇಕ ವಿರೋಧಗಳ ನಡುವೆಯೂ 18 ಶಾಲೆಗಳನ್ನು ತೆರೆಯುವ ಮೂಲಕ ಉಚಿತ ಶಿಕ್ಷಣ ನೀಡಿ, ಮಹಿಳೆಯರು ಎಲ್ಲಾ ರಂಗಗಳಲ್ಲೂ ಪ್ರಗತಿ ಸಾಧಿಸಲು ಮುನ್ನುಡಿ ಬರೆದ ಕೀರ್ತಿ ಸಾವಿತ್ರಿ ಬಾಯಿ ಫುಲೆ ಅವರಿಗೆ ಸೇರುತ್ತದೆ ಎಂದು ಹೇಳಿದರು.

ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಪುರುಷರಷ್ಟೇ ಸರಿ ಸಮನಾಗಿ ಪ್ರಗತಿ ಸಾಧಿಸಲು ಸಾವಿತ್ರಿ ಬಾಯಿ ಫುಲೆ ಮಾಡಿದ ಅಕ್ಷರ ಕ್ರಾಂತಿಯೇ ಕಾರಣವಾಗಿದೆ. ಸಾವಿತ್ರಿ ಬಾಯಿ ಫುಲೆ ಅವರ ಜಯಂತಿಯನ್ನು ಸರ್ಕಾರದ ವತಿಯಿಂದಲೇ ಆಚರಿಸುವಂತಾಗಬೇಕೆಂದು ಒತ್ತಾಯಿಸಿದರು.

ನಿವೃತ್ತ ಇಂಜಿನಿಯರ್ ಎಸ್.ಎಲ್. ಆನಂದಪ್ಪ ಮಾತನಾಡಿ, ಮಹಿಳಾ ಸಮಾನತೆ ಮತ್ತು ಮಹಿಳಾ ಶಿಕ್ಷಣಕ್ಕೆ ಸಾವಿತ್ರಿ ಬಾಯಿ ಫುಲೆ ಹಾಗೂ ಬಸವಣ್ಣನವರು ನೀಡಿದ ಕೊಡುಗೆ ಅನನ್ಯವಾದುದು ಎಂದರು.

ಶಿಕ್ಷಣ, ಆರೋಗ್ಯ, ವಸತಿ ಸೇರಿದಂತೆ ಅನೇಕ ಯೋಜನೆಗಳನ್ನು ಸರ್ಕಾರ ಸ್ಲಂ ಜನರ ಏಳಿಗಾಗಿ ರೂಪಿಸಿದೆ. ಆದರೆ ಇಚ್ಛಾಶಕ್ತಿ ಕೊರತೆಯಿಂದಾಗಿ ಉಪಯುಕ್ತ ಯೋಜನೆಗಳು ಸಮರ್ಪಕವಾಗಿ ದೊರೆಯಲು ಸಾಧ್ಯವಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸ್ಲಂ ಜನಾಂದೋಲನ - ಕರ್ನಾಟಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ರೇಣುಕಾ ಯಲ್ಲಮ್ಮ ಮಾತನಾಡಿ, ಬಹು ದಿನಗಳಿಂದಲೂ ಸ್ಲಂ ಜನಾಂದೋಲನ ಕರ್ನಾಟಕ ಹೋರಾಟ ಮಾಡುತ್ತಾ ಬಂದಿದ್ದರೂ ಇನ್ನೂ ಮೂಲಭೂತ ಸೌಲಭ್ಯಗಳ ಕೊರತೆ ಕಂಡುಬರುತ್ತಿರುವುದು ವಿಷಾದದ ಸಂಗತಿ ಎಂದರು.

ಸಂಘಟನೆಯ ಗೌರವಾಧ್ಯಕ್ಷ ಶಬ್ಬೀರ್ ಸಾಬ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರಟ್ಟಿಹಳ್ಳಿ ಮಾರುತಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ರವಿಕುಮಾರ್ ಉಪನ್ಯಾಸ ನೀಡಿದರು. ಡಿ.ಎಸ್-4 ರಾಜ್ಯ ಪ್ರಧಾನ ಕಾರ್ಯದರ್ಶಿ ಹೆಗ್ಗೆರೆ ರಂಗಪ್ಪ ಕ್ರಾಂತಿಗೀತೆ ಹಾಡಿದರು. ಯಾಸ್ಮಿನ್ ಮತ್ತಿತರರು ಉಪಸ್ಥಿತರಿದ್ದರು.

# ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾಗಿ ಕುಸುಮಾ ಲೋಕೇಶ್




ದಾವಣಗೆರೆ, ಜ. 6 - ಜಿಲ್ಲಾ ಕದಳಿ ಮಹಿಳಾ ವೇದಿಕೆ ಗೌರವಾಧ್ಯಕ್ಷರಾಗಿ ಸಾವಿತ್ರಮ್ಮ ಸಿದ್ದಪ್ಪ, ಜಿಲ್ಲಾ ಘಟಕದ ಅಧ್ಯಕ್ಷರಾಗಿ ಕುಸುಮಾ ಲೋಕೇಶ್, ಉಪಾಧ್ಯಕ್ಷರಾಗಿ ನಿರ್ಮಲ ಶಿವಕುಮಾರ್, ಕಾರ್ಯ ದರ್ಶಿ ಯಾಗಿ ಚಂದ್ರಿಕಾ ಮಂಜುನಾಥ್, ಖಜಾಂಚಿ ಯಾಗಿ ವಿಜಯಲಕ್ಷ್ಮಿ ಬಸವರಾಜ್, ಸಹ ಕಾರ್ಯ ದರ್ಶಿಯಾಗಿ ವಾಣಿ ರಾಜ್ ಆಯ್ಕೆಯಾಗಿದ್ದಾರೆ.

ತಾಲ್ಲೂಕು ಘಟಕಕ್ಕೆ ವಿನೋದ ಅಜಗಣ್ಣನವರ್ (ಅಧ್ಯಕ್ಷರು), ಮಮತಾ ನಾಗರಾಜ್ (ಉಪಾಧ್ಯಕ್ಷರು), ಕೆ.ಆರ್. ವಸಂತ (ಕಾರ್ಯದರ್ಶಿ), ಸೌಮ್ಯ ಸತೀಶ್ (ಖಜಾಂಚಿ), ನಂದಿನಿ ಗಂಗಾಧರ್ (ಸಹ ಕಾರ್ಯದರ್ಶಿ) ಆಯ್ಕೆಯಾಗಿದ್ದಾರೆ.

ನಗರ ಘಟಕಕ್ಕೆ ಗಾಯತ್ರಿ ವಸ್ತ್ರದ್ (ಅಧ್ಯಕ್ಷರು), ವಿಜಯ ಚಂದ್ರಶೇಖರ್, (ಉಪಾಧ್ಯಕ್ಷರು), ರತ್ನ ರೆಡ್ಡಿ (ಕಾರ್ಯದರ್ಶಿ), ಪೂರ್ಣಿಮಾ ಪ್ರಸನ್ನ ಕುಮಾರ್ (ಖಜಾಂಚಿ), ಲಕ್ಷ್ಮಿ ಮಲ್ಲಿಕಾರ್ಜುನ್‌ಸ್ವಾಮಿ (ಸಹ ಕಾರ್ಯದರ್ಶಿ) ಆಯ್ಕೆಯಾಗಿದ್ದಾರೆ.

# ಕೊರೊನಾ : ಸಾರ್ವಜನಿಕ ಆಸ್ಪತ್ರೆಗೆ ಭೇಟಿ, ಪರಿಶೀಲಿಸಿದ ಡಿಸಿ ಅನಿರುದ್ಧ್



**ಹರಪನಹಳ್ಳಿ**

ಹರಪನಹಳ್ಳಿ, ಜ.6- ರಾಜ್ಯದಲ್ಲಿ ಕೊರೊನಾ ಮೂರನೇ ಅಲೆ ಹಾಗೂ ಓಮಿಕ್ರಾನ್ ಪ್ರಕರಣಗಳು ಹೆಚ್ಚಾಗುತ್ತಿರುವ ಬೆನ್ನಲ್ಲೆ ವಿಜಯನಗರ ಜಿಲ್ಲಾಧಿಕಾರಿ ಅನಿರುದ್ಧ್ ಶ್ರವಣ್ ಗುರುವಾರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿ ವಾರ್ಡುಗಳ ಹಾಗೂ ಆಕ್ಸಿಜನ್ ಬೆಡ್‌ಗಳನ್ನು ವೀಕ್ಷಿಸಿದರು.

ನಂತರ ಸುದ್ದಿಗಾರೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ, ವಿಜಯನಗರ ಜಿಲ್ಲಾದ್ಯಂತ ಎಲ್ಲಾ ತಾಲ್ಲೂಕುಗಳ ಸಾರ್ವಜನಿಕ ಆಸ್ಪತ್ರೆಗಳಿಗೆ ಸಮರ್ಪಕ ಔಷಧಿಗಳನ್ನು ಒದಗಿಸುವ ಹಾಗೂ ಕೊರೊನಾ ಮೂರನೇ ಅಲೆಯನ್ನು ಎದುರಿಸಲು ಸಿದ್ದತೆ ಮಾಡಿಕೊಂಡಿದ್ದೇವೆ ಎಂದು ತಿಳಿಸಿದರು.

ಮೂರನೇ ಅಲೆಯ ಸಿದ್ಧತೆಯ ಬಗ್ಗೆ ಈಗಾಗಲೇ ಜಿಲ್ಲೆಯ ಎಲ್ಲಾ ಆಸ್ಪತ್ರೆಗಳಲ್ಲಿ ಸಭೆ ಮಾಡುತ್ತಿದ್ದೇವೆ. ಹರಪನಹಳ್ಳಿ ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ್ದೇನೆ. ಆಸ್ಪತ್ರೆಯಲ್ಲಿ ಆಕ್ಸಿಜನ್, ಬೆಡ್ ವ್ಯವಸ್ಥೆಯಿದ್ದು, ಕೊರೊನಾ ಮೂರನೇ ಅಲೆಯ ಮುಂಜಾಗ್ರತೆಯ ಅನುಗುಣವಾಗಿ ಆಕ್ಸಿಜನ್‌ಗೆ ತಕ್ಕಂತೆ ಬೆಡ್ ವ್ಯವಸ್ಥೆ ಮಾಡಲಾಗುವುದು ಎಂದರು.

ತಾಲ್ಲೂಕಿನಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಇರುವ ವೈದ್ಯರ ಕೊರತೆ ನಮ್ಮ ಗಮನಕ್ಕೆ ಬಂದಿದ್ದು, ಸರ್ಕಾರದ ನಿಯಮಾನುಸಾರ ಶೀಘ್ರದಲ್ಲೇ ಭರ್ತಿ ಮಾಡಿಕೊಳ್ಳಲಾಗುವುದು. ಸಾರ್ವಜನಿಕರು ಕೊರೊನಾ ನಿಯಮಗಳನ್ನು ಪಾಲಿಸುವ ಮೂಲಕ ಜಾಗೃತರಾಗಿ ಕೊರೊನಾ ಎದುರಿಸಲು ಎಲ್ಲರೂ ಸಹಕರಿಸಿ ಎಂದ ಅವರು, ಇದುವರೆಗೂ ಓಮಿಕ್ರಾನ್ ಪ್ರಕರಣ ಪತ್ತೆಯಾಗಿಲ್ಲ. ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಹೆಚ್. ಜಿ.ಚಂದ್ರಶೇಖರಯ್ಯ, ತಹಶೀಲ್ದಾರ್ ಎಲ್.ಎಂ. ನಂದೀಶ್, ತಾ.ಆರೋಗ್ಯಾಧಿಕಾರಿ ಡಾ. ಹಾಲಸ್ವಾಮಿ, ತಾ.ಪಂ.ಇಒ ಪ್ರಕಾಶ್‌ನಾಯ್ಕ, ಪುರಸಭೆ ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ, ಬಿ.ಇ.ಒ ಯು.ಬಸವರಾಜ, ತೋಟಗಾರಿಕೆ ಇಲಾಖೆಯ ಜಯಸಿಂಹ ಡಾ. ಶಂಕರನಾಯ್ಕ ಸೇರಿದಂತೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ವಾರಾಂತ್ಯದ ಕರ್ಫ್ಯೂ : ಸರ್ಕಾರದ ಮಾರ್ಗಸೂಚಿಗಳು ಅವೈಜ್ಞಾನಿಕ



ದಾವಣಗೆರೆ,ಜ.6- ಓಮಿಕ್ರಾನ್ ಹಿನ್ನೆಲೆಯಲ್ಲಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳು ಅವೈಜ್ಞಾನಿಕವಾಗಿವೆ ಎಂದು ಹೇಳಿರುವ ನಗರದ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ, ಈ ಮಾರ್ಗಸೂಚಿಗಳಲ್ಲಿ ನೀತಿ - ನಿಯಮಗಳಿಲ್ಲ ಎಂದು ಕಿಡಿ ಕಾರಿದ್ದಾರೆ.

ಕೊರೊನಾ 3ನೇ ಅಲೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿರುವ ವಾರಾಂತ್ಯದ ಕರ್ಫ್ಯೂ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಹೋಟೆಲ್‌ಗಳಿಂದಲೇ ಕೊರೊನಾ ಹರಡುತ್ತದೆ ಎನ್ನುವ ರೀತಿಯಲ್ಲಿ ಹೋಟೆಲ್‌ಗಳ ಮೇಲೆ ನಿರ್ಬಂಧಗಳನ್ನು ವಿಧಿಸಿರುವುದನ್ನು ಖಂಡಿಸಿದ್ದಾರೆ. ಬಸ್ಸಿನಲ್ಲಿ 50, ಚಿತ್ರಮಂದಿರಗಳಲ್ಲಿ ನೂರಾರು, ರೈಲಿನಲ್ಲಿ ಸಾವಿರಾರು ಜನರು ಸೇರುವಾಗ ಅವುಗಳಿಗೆ ಒಂದು ನಿಯಮವಾದರೆ, ಹೋಟೆಲ್‌ಗಳಿಗೆ ಮತ್ತೊಂದು ನಿಯಮ ಮಾಡಲಾಗಿದೆ. ಇದು ಯಾವ ನೀತಿ ? ಎಂದು ರಾಜಣ್ಣ ಅವರು ಪ್ರಶ್ನಿಸಿದ್ದಾರೆ.

ಬಹುತೇಕ ಹೋಟೆಲ್‌ಗಳಲ್ಲಿ ಬಿಸಿ ನೀರು, ಬಿಸಿ ಊಟ ಕೊಡುತ್ತಿರುವುದಲ್ಲದೇ, ಗ್ರಾಹಕರನ್ನು ಟೇಬಲ್‌ಗೆ ಒಬ್ಬಿಬ್ಬರಂತೆ ಕುಳಿತುಕೊಳ್ಳಲು ಅವಕಾಶ ಮಾಡಿಕೊಡುವುದರ ಮೂಲಕ ಸರ್ಕಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರೂ, ಹೋಟೆಲ್‌ಗಳಿಂದಲೇ ಕೊರೊನಾ ಹರಡುತ್ತೆ ಎನ್ನುವ ರೀತಿಯಲ್ಲಿ ಹೋಟೆಲ್‌ಗಳ ಮೇಲೆ ನಿರ್ಬಂಧ ಹೇರುವುದು ಸಮಂಜಸವಲ್ಲ ಎಂದು ಅವರು ಹೇಳಿದ್ದಾರೆ.

ವಾರಾಂತ್ಯದ ದಿನಗಳಲ್ಲಿ ಕರ್ಫ್ಯೂ ವಿಧಿಸಿದರೆ, ಪ್ರತಿದಿನ ರಾತ್ರಿ 10 ರಿಂದ ಬೆಳಿಗ್ಗೆ 5ರವರೆಗೆ ಕರ್ಫ್ಯೂ ಹಾಕಿದರೆ ಕೊರೊನಾ ಹರಡದಂತೆ ತಡೆಗಟ್ಟಲು ಸಾಧ್ಯವೇ ? ಎಂದು ಕೇಳಿರುವ ಅವರು, ಉಳಿದ ದಿನಗಳು, ಹಗಲು ಹೊತ್ತಿನಲ್ಲಿ ಕೊರೊನಾ ಹರಡುವುದಿಲ್ಲವೇ ? ಎಂದು ಪ್ರಶ್ನಿಸಿದ್ದಾರೆ. ಮಾರ್ಗಸೂಚಿಗಳನ್ನು ರೂಪಿಸುವಾಗ ಎಲ್ಲಾ ಆಚಾರ - ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಮಾಡಬೇಕು. ಯದ್ವಾ - ತದ್ವ, ನೀತಿ - ನಿಯಮಗಳಿಲ್ಲದಂತಿರುವ ಮಾರ್ಗಸೂಚಿಗಳು ಬೇಕೇ ಎಂದೂ ಕೇಳಿದ್ದಾರೆ.

# ಧೂಳೆಹೊಳೆ : ಸಾಮೂಹಿಕ ಸಂಕ್ರಾಂತಿ ಮುಂದೂಡಿಕೆ

ಮಲೇಬೆನ್ನೂರು, ಜ.6- ಧೂಳೆಹೊಳೆ ಗ್ರಾಮದ ತುಂಗಭದ್ರಾ ನದಿ ತಟದಲ್ಲಿರುವ ಜಿಎಂಸಿಜಿ ಪ್ರೌಢಶಾಲೆ ಮುಂಭಾಗದಲ್ಲಿರುವ ಸಮುದಾಯ ಭವನದಲ್ಲಿ ಇದೇ ದಿನಾಂಕ 14 ರಂದು ಆಚರಿಸುವ ಸಾಮೂಹಿಕ ಸಂಕ್ರಾಂತಿ ಹಬ್ಬವನ್ನು ಕೋವಿಡ್ ಕಾರಣದಿಂದಾಗಿ ಮುಂದೂಡಲಾಗಿದೆ ಎಂದು ಸಿರಿಗೆರೆ ನಾಗನಗೌಡ್ರು ತಿಳಿಸಿದ್ದಾರೆ.

# ಲೇವಾದೇವಿ, ಗಿರವಿದಾರರು ಸಾಲ ನೀಡಿಕೆ ಮಾಹಿತಿ ಸಲ್ಲಿಸಲು ಸೂಚನೆ

ದಾವಣಗೆರೆ, ಜ. 6-ದಾವಣಗೆರೆ, ಹರಿಹರ, ಚನ್ನಗಿರಿ, ಹೊನ್ನಾಳಿ, ನ್ಯಾಮತಿ ಹಾಗೂ ಜಗಳೂರು ತಾಲ್ಲೂಕುಗಳಲ್ಲಿ ಬರುವ ಹಣಕಾಸು ಸಂಸ್ಥೆಗಳು ಲೇವಾದೇವಿ ಹಾಗೂ ಗಿರವಿದಾರರು ಕಾಯ್ದೆಯನ್ವಯ ದಾವಣಗೆರೆ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಲೇವಾದೇವಿ ಸಹಾಯಕ ನಿಬಂಧಕರ ಕಛೇರಿಗೆ ಪ್ರತಿ ತಿಂಗಳು ಸಾಲ ನೀಡಿದ ಮಾಹಿತಿಗಳಿರುವ ಫಾರಂ ನಂ. 6 ಅನ್ನು ಕಡ್ಡಾಯವಾಗಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ.

ಲೇವಾದೇವಿ ಕಾಯ್ದೆ 1961ರ ಕಲಂ 20 (1) ರನ್ವಯ ಹಲವಾರು ಹಣಕಾಸು ಸಂಸ್ಥೆಗಳು, ಲೇವಾದೇವಿ ಹಾಗೂ ಗಿರವಿದಾರರು ಫಾರಂ-6ನ್ನು ಸಲ್ಲಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಇನ್ನು ಮುಂದೆ ನೋಂದಾಯಿತ ಹಣಕಾಸು ಸಂಸ್ಥೆಗಳು, ಲೇವಾದೇವಿ ಹಾಗೂ ಗಿರವಿದಾರರು ದಾವಣಗೆರೆ ಉಪವಿಭಾಗ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಲೇವಾದೇವಿ ಸಹಾಯಕ ನಿಬಂಧಕರ ಕಛೇರಿಗೆ ಪ್ರತಿ ಮಾಹೆ ಫಾರಂ ನಂ-06 ಅನ್ನು ಕಡ್ಡಾಯವಾಗಿ ಸಲ್ಲಿಸಬೇಕು. ತಪ್ಪಿದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ದಾವಣಗೆರೆ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಲೇವಾದೇವಿ ಸಹಾಯಕ ನಿಬಂಧಕರು ಎಚ್ಚರಿಸಿದ್ದಾರೆ.

# ಕೊರೊನಾ ಸೋಂಕು ತಡೆಯಬೇಕಾಗಿದೆ



**ಎಂಸಿಸಿ ಬಿ ಬ್ಲಾಕ್‌ನಲ್ಲಿ ನಡೆದ ಲಸಿಕಾ ಅಭಿಯಾನದಲ್ಲಿ ಗಡಿಗುಡಾಳ್ ಮಂಜುನಾಥ್**

ದಾವಣಗೆರೆ, ಜ. 6- ದಿನೇ ದಿನೇ ದೇಶ ಹಾಗೂ ರಾಜ್ಯದಲ್ಲಿ ಕೊರೊನಾ ಸೋಂಕು ವೇಗವಾಗಿ ಹರಡುತ್ತಿದೆ. ಇದನ್ನು ತಡೆಯಬೇಕಾದ ಅವಶ್ಯಕತೆ ಇದೆ. ನಾವೆಲ್ಲರೂ ಎರಡು ಡೋಸ್ ಪಡೆದಿದ್ದೇವೆ. ನೀವೂ ಪಡೆದುಕೊಳ್ಳಿ ಎಂದು ಮಹಾನಗರ ಪಾಲಿಕೆ ಸದಸ್ಯ ಗಡಿಗುಡಾಳ್ ಮಂಜುನಾಥ್ ಹೇಳಿದರು.

ಅವರು ನಗರದ ಎಂಸಿಸಿ ಬಿ ಬ್ಲಾಕ್‌ನ ನಾಲ್ಕು ಕಡೆಗಳಲ್ಲಿ 15 ರಿಂದ 18 ವರ್ಷದೊಳಗಿನವರಿಗೆ ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಲಸಿಕೆ ಪಡೆಯಲು ಬಂದವರಿಗೆ ಆತ್ಮಸ್ಥೈರ್ಯ ಹಾಗೂ ಧೈರ್ಯ ತುಂಬಿ ಮಾತನಾಡುತ್ತಿದ್ದರು.

ಗುಂಡಿ ಸ್ಕೂಲ್, ಎಆರ್ ಜಿ ಕಾಲೇಜು, ಡಿಆರ್ ಎಂ ಸೈನ್ಸ್ ಕಾಲೇಜು, ಬಿಆರ್ ಎಂ ಪಾಲಿಟೆಕ್ನಿಕ್ ಕಾಲೇಜ್ ನಲ್ಲಿ ಲಸಿಕಾ ಅಭಿಯಾನ ನಡೆಯಿತು.

# ರಾಜಕೀಯ ದುರುದ್ಧೇಶದಿಂದ ವಾರಾಂತ್ಯದ ಕರ್ಫ್ಯೂ : ಖಂಡನೆ



ದಾವಣಗೆರೆ,ಜ.6- ಓಮಿಕ್ರಾನ್ ತಡೆಗಟ್ಟುವ ಉದ್ದೇಶದಿಂದ ಸರ್ಕಾರ ಮಾಡಿರುವ ವಾರಾಂತ್ಯದ ಕರ್ಫ್ಯೂ ಕ್ರಮವನ್ನು ಖಂಡಿಸಿರುವ ನಗರಸಭೆ ಮಾಜಿ ಅಧ್ಯಕ್ಷರೂ ಆದ ಜಿಲ್ಲಾ ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಬಿ.ವೀರಣ್ಣ, ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳು ರಾಜಕೀಯ ದುರುದ್ದೇಶದಿಂದ ಕೂಡಿವೆ ಎಂದು ದೂರಿದ್ದಾರೆ.

ಈ ಸಂಬಂಧ ಹೇಳಿಕೆ ನೀಡಿರುವ ಅವರು, ಮೇಕೆದಾಟು ಯೋಜನೆ ಜಾರಿಗೆ ಒತ್ತಾಯಿಸಿ ಕಾಂಗ್ರೆಸ್ ಪಕ್ಷವು ನಡೆಸುತ್ತಿರುವ ಪಾದಯಾತ್ರೆಯನ್ನು ತಡೆಯುವ ದುರುದ್ದೇಶದಿಂದ ಓಮಿಕ್ರಾನ್ ನೆಪದಲ್ಲಿ ಸರ್ಕಾರ ಕರ್ಫ್ಯೂ ವಿಧಿಸಿದೆ ಎಂದು ಆರೋಪಿಸಿದ್ದಾರೆ.

ಕಳೆದ ವರ್ಷ ಕೊರೊನಾ ತಡೆಗಟ್ಟಲು ತಿಂಗಳುಗಂಟಲೇ ಕರ್ಫ್ಯೂ ವಿಧಿಸಿದ ಪರಿಣಾಮ ಜನ ಸಾಮಾನ್ಯರು, ವ್ಯಾಪಾರಸ್ಥರು, ಬಡವರು ತೀವ್ರ ಸಂಕಷ್ಟಕ್ಕೊಳಗಾಗಿದ್ದರು. ಅದನ್ನು ಸುಧಾರಿಸಿಕೊಳ್ಳುವ ಹಂತದಲ್ಲಿ ಓಮಿಕ್ರಾನ್ ನೆಪವೊಡ್ಡಿ ಕರ್ಫ್ಯೂ ವಿಧಿಸಿರುವ ಸರ್ಕಾರದ ಕ್ರಮ ಸಮಂಜಸವಲ್ಲ ಎಂದು ಅವರು ತಿಳಿಸಿದ್ದಾರೆ.

# ಎ.ಐ.ವೈ.ಎಫ್. ಸಮ್ಮೇಳನಕ್ಕೆ ವಾಸು, ರಾಜು



ದಾವಣಗೆರೆ, ಜ.6- ಹೈದರಾಬಾದ್‌ನಲ್ಲಿ ನಾಳೆ ದಿನಾಂಕ 7 ರಿಂದ 10 ರವರೆಗೆ ಜರುಗಲಿರುವ ಎ.ಐ.ವೈ.ಎಫ್. ರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ನಗರದ ಆವರಗೆರೆ ವಾಸು ಮತ್ತು ರಾಜು ಕೆರನಹಳ್ಳಿ ತೆರಳಿದ್ದಾರೆ.

# ನಗರದಲ್ಲಿ ಇಂದಿನ ಪುರಾಣ - ಪ್ರವಚನದಲ್ಲಿ ತೊಟ್ಟಿಲು ಕಾರ್ಯಕ್ರಮ



ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಡೆಯುತ್ತಿರುವ ಒಂದು ತಿಂಗಳ ಪರ್ಯಂತದ ಮುಗುಳಖೋಡದ ಶ್ರೀ ಯಲ್ಲಾಲಿಂಗೇಶ್ವರ ಘನ ಲೀಲಾಮೃತ ಪುರಾಣ ಪ್ರವಚನದಲ್ಲಿ ಇಂದು ತೊಟ್ಟಿಲು ಕಾರ್ಯಕ್ರಮ ಜರುಗಲಿದೆ. ಪ್ರವಚನ ಪ್ರವೀಣ ಶ್ರೀ ತೋಟೇಂದ್ರ ಶಾಸ್ತ್ರಿಗಳು (ಅಬ್ಬೆ - ತುಮಕೂರು) ಈ ಪ್ರವಚನವನ್ನು ನಡೆಸಿಕೊಡುತ್ತಿದ್ದು, ಭಕ್ತಾದಿಗಳು, ಸಾರ್ವಜನಿಕರು ಭಾಗವಹಿಸುವಂತೆ ಕಾರ್ಯಕ್ರಮದ ಸಂಚಾಲಕ ಅಜ್ಜಂಪುರ ಶೆಟ್ರು ಮೃತ್ಯುಂಜಯ ತಿಳಿಸಿದ್ದಾರೆ.

# ವೇದಬ್ರಹ್ಮ ಅನಂತ ದೀಕ್ಷಿತ್ (ಭಟ್) ವಿಧಿವಶ



ದಾವಣಗೆರೆ, ಜ.6- ಹಿರಿಯ ವೇದ ಬ್ರಹ್ಮ, ಹೆಸರಾಂತ ಪುರೋಹಿ ತರಾದ ಅನಂತ ದೀಕ್ಷಿತ್ (ಭಟ್) ಅವರು ನಗರದ ಕೆ.ಬಿ. ಬಡಾವಣೆ ದೀಕ್ಷಿತ್ ರಸ್ತೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ವಯೋಸಹಜವಾಗಿ ಇಂದು ಬೆಳಿಗ್ಗೆ 5.30 ಕ್ಕೆ ನಿಧನರಾದರು.

ಸಂಸ್ಕೃತದಲ್ಲಿ ಅಪ್ರತಿಮ ಪಾಂಡಿತ್ಯ ಹೊಂದಿದ್ದ ಅವರು ಪುರೋಹಿತರಾಗಿ ಅನೇಕ ಸುಪ್ರಸಿದ್ಧ ಮನೆತನಗಳವರ ಕುಲ ಪುರೋಹಿತರಾಗಿದ್ದರು. ಅವರಿಗೆ ಸುಮಾರು 87 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ಮೂವರು ಪುತ್ರಿಯರು, ಅಪಾರ ಬಂಧು ವರ್ಗ, ಶಿಷ್ಯ ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ಇಂದು ಸಂಜೆ ನಗರದ ವೈಕುಂಠಧಾಮದಲ್ಲಿ ನೆರವೇರಿತು. ಅನಂತ ದೀಕ್ಷಿತ್ ಅವರ ನಿಧನಕ್ಕೆ ಹಿರಿಯ ಪತ್ರಕರ್ತ ಎಚ್.ಬಿ. ಮಂಜುನಾಥ್ ಶೋಕ ವ್ಯಕ್ತಪಡಿಸಿದ್ದಾರೆ.

# 250 ಕೋಟಿ ರೂ. ವಂಚನೆ: ಸೊಸೈಟಿ ಅಧ್ಯಕ್ಷನ ಬಂಧನ

ನವದೆಹಲಿ, ಜ. 6 – ಅಕ್ರಮ ಹಣ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿಯ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷರೊಬ್ಬರನ್ನು ಜಾರಿ ನಿರ್ದೇಶನಾಲಯ ಬಂಧಿಸಿದೆ. ಈ ಸೊಸೈಟಿಯಲ್ಲಿ ಠೇವಣಿದಾರರಿಗೆ 250 ಕೋಟಿ ರೂ. ವಂಚಿಸಲಾಗಿತ್ತು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷ ಆನಂದ ಬಾಲಕೃಷ್ಣ ಅಪ್ಪುಗೋಳ ಅವರನ್ನು ಬುಧವಾರ ಬಂಧಿಸಲಾಗಿದೆ.

ಬೆಂಗಳೂರಿನ ಪಿ.ಎಂ.ಎಲ್.ಎ. ನ್ಯಾಯಾಲಯದ ಎದುರು ಹಾಜರು ಪಡಿಸಿದ ನಂತರ ಇ.ಡಿ. ಕಸ್ಟಡಿಗೆ ವಹಿಸಲಾಗಿದೆ.

2017ರ ಮಾರ್ಚ್‌ವರೆಗೆ ಸೊಸೈಟಿ 250 ಕೋಟಿ ರೂ. ಠೇವಣಿಯನ್ನು 26 ಸಾವಿರಕ್ಕೂ ಹೆಚ್ಚು ಜನರಿಂದ ಸಂಗ್ರಹಿಸಿತ್ತು. ಆದರೆ, ಸಮಯಕ್ಕೆ ಸರಿಯಾಗಿ ಹಣ ಮರು ಪಾವತಿಸಿರಲಿಲ್ಲ. ಠೇವಣಿದಾರರ ಹಣವನ್ನು ಕಬಳಿಸಲಾಗಿದೆ ಎಂದು ಆರೋಪಿಸಲಾಗಿದೆ.

**ಹತ್ತನೇ ವರ್ಷದ ಸವಿನೆನಪು**



**ದಿ. ಸಿಂಗರಹಳ್ಳಿ ಗುರುಮೂರ್ತಿ**

*ನೀವು ನಮ್ಮನ್ನಗಲಿ ಇಂದಿಗೆ 10 ವರ್ಷಗಳು ಕಳೆದರೂ ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದೀರಿ. ನಿಮ್ಮ ನೆನಪು ಸದಾ ನಮ್ಮ ಮನಗಳಲ್ಲಿ ಹಚ್ಚ ಹಸಿರಾಗಿದೆ.*

ಶ್ರೀ ಸಿಂಗರಹಳ್ಳಿ ವೆಂಕಪ್ಪ ಮತ್ತು ಮಕ್ಕಳು
ಶ್ರೀಮತಿ ಜಿ.ಎಸ್. ಗೀತಾ ಮತ್ತು ಮಕ್ಕಳು, ಅಳಿಯ ಹಾಗೂ ಮೊಮ್ಮಗ

**ಏಳನೇ ವರ್ಷದ ಪುಣ್ಯಸ್ಮರಣೆ**



**ಲಿಂ|| ಶ್ರೀ ಪಾಟೀಲ್ ವಿರೂಪಾಕ್ಷಗೌಡ್ರು**

ನಿಧನ : 07.01.2015

ನೀವು ನಮ್ಮನ್ನಗಲಿ ಏಳು ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ನಾವು ಮುನ್ನಡೆಯುತ್ತಿದ್ದೇವೆ.
ನೀವು ಭೌತಿಕವಾಗಿ ಮರೆಯಾಗಿದ್ದರೂ,
ನೆನಪಾಗಿ ನಮ್ಮಲ್ಲಿ ಜೀವಂತವಾಗಿದ್ದೀರಿ.
ನಿಮ್ಮನ್ನು ಸದಾ ನೆನೆಸುತ್ತಿರುವ,

ಪತ್ನಿ : ✦ ಶ್ರೀಮತಿ ನಿಂಗಮ್ಮ ಮತ್ತು ಮಕ್ಕಳು ಹಾಗು
ಸೊಸೆಯಂದಿರಾದ : ✦ ಪಾಟೀಲ್ ಕೆಂಚನಗೌಡ, ತಾ.ಪಂ. ಸದಸ್ಯರು, ಉಚ್ಚಂಗಿದುರ್ಗ ಕ್ಷೇತ್ರ., ನಿರ್ದೇಶಕರು, ವಿಶ್ವಬಂಧು ಸೌಹಾರ್ದ ಸಹಕಾರಿ ನಿಯಮಿತ, ಹರಪನಹಳ್ಳಿ, ಅಧ್ಯಕ್ಷರು, ಬಿಜೆಪಿ ರೈತ ಮೋರ್ಚಾ, ಜಗಳೂರು ವಿಧಾನ ಸಭಾ ಕ್ಷೇತ್ರ
✦ ಶ್ರೀಮತಿ ನಿರ್ಮಲ ಕೆಂಚನಗೌಡ, ಮಾಜಿ ಉಪಾಧ್ಯಕ್ಷರು, ಗ್ರಾ.ಪಂ. ಉಚ್ಚಂಗಿದುರ್ಗ.
✦ ಮಂಜುನಾಥ ಪಾಟೀಲ್, ಅಧ್ಯಕ್ಷರು, ವ್ಯ.ಸೇ.ಸ.ಬ್ಯಾಂಕ್ ಉಚ್ಚಂಗಿದುರ್ಗ.
✦ ಶ್ರೀಮತಿ ಇಂದಿರ ಮಂಜುನಾಥ ಪಾಟೀಲ್
✦ ಶ್ರೀಮತಿ ಸುಧಾ ಮತ್ತು ಶ್ರೀ ಶಿವನಗೌಡ ಪಾಟೀಲ್
ಮಗಳು : ✦ ಶ್ರೀಮತಿ ಗೌರಮ್ಮ ಅಳಿಯ : ✦ ಎನ್.ಎನ್. ಗುರುಬಸವರಾಜು, ಪಲ್ಲಾಗಟ್ಟೆ.
ಮೊಮ್ಮಕ್ಕಳಾದ : ✦ ಸಿದ್ಧಾರ್ಥ ಪಾಟೀಲ್ ✦ ಚಂದನ ಪಾಟೀಲ್ ✦ ರೇವತಿ ಪಾಟೀಲ್, ✦ ಪ್ರಶಾಂತ ಪಾಟೀಲ್ ✦ ಚೇತನ ಪಾಟೀಲ್ ✦ ಸೇತು ✦ ನಂದಿನಿ ✦ ಸಮರ್ಥ ಪಾಟೀಲ್
✦ ಪುನೀತ್ ಪಾಟೀಲ್ ಹಾಗೂ ಬಂಧು-ಮಿತ್ರರು.
✦ ಲಿಂ|| ಮಲ್ಲಮ್ಮ, ಲಿಂ|| ಪಾಟೀಲ್ ಪರಶುರಾಮನ ಗೌಡ್ರ ವಂಶಸ್ಥರು, ಯು. ಬೇವಿನಹಳ್ಳಿ, ಹರಪನಹಳ್ಳಿ ತಾ||

ಮಾಲೀಕರು, ಶ್ರೀ ಮರುಳಸಿದ್ದೇಶ್ವರ ಸ್ಟೋನ್ ಕ್ರಷರ್
ಮತ್ತು ಪಿ.ವಿ.ಜಿ. ಸ್ಟೋನ್ ಕ್ರಷರ್, ಗೌರಿ ಎಲೆಕ್ಟ್ರಿಕಲ್ ವೆಹಿಕಲ್ಸ್ ಸಿಬ್ಬಂದಿ ವರ್ಗ

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte